# "ಆಡಳಿತ"ದ "ಖಾಸಗೀಕರಣ"
# ನೈಸರ್ಗಿಕ ಸಂಪನ್ಮೂಲಗಳು, ಜನರ ಹಕ್ಕುಗಳು ಮತ್ತು ಭಾರತದ ಪ್ರವಾಸೋದ್ಯಮ
# ಸಮೀಕರಣ, ನವೆಂಬರ್ 2008

## ಸಾರ್ವಜನಿಕ ಉದ್ದೇಶಕ್ಕಾಗಿ ಖಾಸಗಿ ಲಾಭ

ರಾಜ್ಯ ಸರಕಾರವು ರಾಜ್ಯದ ಕೆರೆಗಳನ್ನು ಖಾಸಗಿ ವ್ಯಕ್ತಿಗಳಿಗೆ ವ್ಯಾಪಾರೀಕರಣಕ್ಕೆ ಒಳಪಡಿಸುವ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯವು(ಇನ್ನು ಮುಂದೆ ಎಚ್‌ಸಿ ಎಂದು ಉಲ್ಲೇಖಿಸಲಾಗುತ್ತದೆ) ರಾಜ್ಯ ಸರಕಾರಕ್ಕೆ ನವೆಂಬರ್ 2008ರ ಮೊದಲನೇ ವಾರದಲ್ಲಿ ತಾಕೀತು ಮಾಡಿತು. ಈ ಸಾರ್ವಜನಿಕ ಮುಕ್ತ ಪ್ರದೇಶಗಳನ್ನು ಖಾಸಗಿ ಆಸ್ತಿಗಳಾಗಿ ಪರಿವರ್ತಿಸುವುದನ್ನು ನಿಲ್ಲಿಸುವಂತೆ ಸರಕಾರಿ ನಿಯೋಜಿತ ಕೆರೆ ಅಭಿವೃದ್ಧಿ ಪ್ರಾಧಿಕಾರ(ಎಲ್‌ಡಿಎ)ಕ್ಕೆ ಎಚ್‌ಸಿ ನಿರ್ದೇಶನ ನೀಡಿತು.ವಾಣಿಜ್ಯ ಅಭಿವೃದ್ಧಿಗಾಗಿ ಕೆರೆಗಳನ್ನು ಖಾಸಗಿ ವ್ಯಕ್ತಿಗಳಿಗೆ ಹಸ್ತಾಂತರಿಸುವ ಎಲ್‌ಡಿಎಯ ನೀತಿಯನ್ನು ಪ್ರಶ್ನಿಸಿ ಬೆಂಗಳೂರಿನ ಕೆಲವು ಪರಿಸರವಾದಿಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ದಾವೆಯ(ಇನ್ನು ಮುಂದೆ ಪಿಐಎಲ್ ಎಂದು ಉಲ್ಲೇಖಿಸಲಾಗುತ್ತದೆ) ವಿಚಾರಣೆ ನಡೆಸಿದ ನಂತರ ಎಚ್‌ಸಿಯು ಈ ತೀರ್ಪನ್ನು ನೀಡಿತು.ಕನಿಷ್ಟ ನಾಲ್ಕು ದೊಡ್ಡ ಕೆರೆಗಳಾದ (ಈ ನೀರಿನ ಆಗರ, ಸೂಕ್ತವಾಗಿ ಯಾವುದನ್ನು ಕೆರೆಗಳು ಎಂದು ಕರೆಯಬಹುದೋ ಅವುಗಳನ್ನು ಮಳೆನೀರನ್ನು ಸಂಗ್ರಹಿಸಲು, ಮತ್ತು ನೀರು ಪೋಲಾಗುವುದನ್ನು ತಪ್ಪಿಸಲು ಶತಮಾನಗಳ ಹಿಂದೆ ನಿರ್ಮಿಸಲಾಗಿತ್ತು) ಹೆಬ್ಬಾಳ ಕೆರೆಯನ್ನು ಈಸ್ಟ್ ಇಂಡಿಯಾ ಹೋಟೆಲ್(ಒಬೆರಾಯ್ ಸಮೂಹದ ಹೋಟೇಲ್), ನಾಗಾವಾರ ಕೆರೆಯನ್ನು ಲುಂಬಿನಿ(ರಿಯಲ್ ಎಸ್ಟೇಟ್ ಡೆವಲಪರ್), ಆಗರ ಕರೆಯನ್ನು ಬಯೋಟಾ( ಸಣ್ಣ ಪ್ರಮಾಣದಲ್ಲಿ ಹೆಸರುಪಡೆದ ಸಂಸ್ಥೆ) ಮತ್ತು ವೆಂಗಯ್ಯ ಕೆರೆಯನ್ನು ಪಾರ್ ಸಿ(ಸ್ಥಳೀಯ ಗೃಹ ನಿರ್ಮಾಪಕ)ಗೆ ಹಸ್ತಾಂತರಿಸಲಾಗಿತ್ತು. ಜೊತೆಗೆ, ಕಿರುಹಂತದ 'ಕೆರೆ ಸ್ವೀಕಾರ' ಯೋಜನೆಯ ಆಧಾರದಲ್ಲಿ ಎಲ್‌ಡಿಎ ಸುಮಾರು 20 ಕೆರೆಗಳನ್ನು ನಿರ್ಮಿಸಿತ್ತು. ಈ ಕೆರೆಗಳ 'ಅಭಿವೃದ್ಧಿ ಮತ್ತು ನಿರ್ವಹಣೆ'ಗಾಗಿ 15 ವರ್ಷಗಳ ಗುತ್ತಿಗೆಯ ಮೇಲೆ ಖಾಸಗಿ ವ್ಯಕ್ತಿಗಳು ಬಿಡ್ ಮಾಡಬಹುದಾದ ಯೋಜನೆಯೊಂದನ್ನು ಎಲ್‌ಡಿಎ 2004ರಲ್ಲಿ ಪ್ರಾರಂಭಿಸಿತ್ತು. ಈ ಯೋಜನೆಯಡಿಯಲ್ಲಿ ತೇಲುವ ರೆಸ್ಟೋರೆಂಟ್, ವಾಟರ್ ಸ್ಕೂಟರ್, ಮನರಂಜನಾ ಪಾರ್ಕ್, ಪಾರ್ಟಿ ಕೇಂದ್ರಗಳು, ಆಹಾರ ಮಳಿಗೆ ಸೇರಿದಂತೆ ವಿವಿಧ ರೀತಿಯ ಸೌಲಭ್ಯಗಳನ್ನು ಗುತ್ತಿಗೆ ಪಡೆದುಕೊಂಡ ವ್ಯಕ್ತಿಗಳು ಅಭಿವೃದ್ಧಿಪಡಿಸಬಹುದಾಗಿತ್ತು. ಎಲ್‌ಡಿಎಯ ಈ ನೀತಿಯಿಂದಾಗಿ ಸಾಮಾನ್ಯ ಜನರಿಂದ ಅವರ ಸಾಮಾಜಿಕ, ಸಾರ್ವಜನಿಕ ಹಾಗೂ ಪರಿಸರ ಪರಿಧಿಗಳ ಮೇಲೆ ನಿಯಂತ್ರಣ ಬೀಳುತ್ತದೆ ಮತ್ತು ಈ ನೀತಿ ರಾಜ್ಯ ಸರಕಾರ ತನ್ನ ಪರಿಸರ ಮತ್ತು ಸಾರ್ವಜನಿಕ ಹಿತರಕ್ಷಣೆಯ ಕರ್ತವ್ಯದಿಂದ ವಿಮುಖಗೊಳ್ಳುವಂತೆ ಮಾಡುತ್ತದೆ ಎಂದು ದಾವೆದಾರರು ವಾದಿಸಿದ್ದರು. ಅಲ್ಲದೆ ಈ ನೀತಿಯು, ತಮ್ಮ ಜೀವನೋಪಾಯಕ್ಕಾಗಿ ಈಗಲೂ ಈ ಕೆರೆಗಳನ್ನೇ ಅವಲಂಬಿಸಿರುವ ಸ್ಥಳೀಯ ಮೀನುಗಾರಿಕಾ ಪಂಗಡ ಮತ್ತು ದನ ಸಾಕಣೆಕಾರರ ಹಕ್ಕುಗಳ ಮೇಲೆ ತೀವ್ರ ರೀತಿಯ ಪರಿಣಾಮ ಬೀರುತ್ತದೆ ಎಂಬುದಾಗಿಯೂ ದಾವೆದಾರರು ವಾದಿಸಿದ್ದರು. ಇನ್ನೊಂದು ಪ್ರಮುಖ ಅಂಶವೆಂದರೆ, ಖಾಸಗಿ ವ್ಯಕ್ತಿಗಳು ಈ ಕೆರೆಗಳ ಮೇಲೆ ನಿಯಂತ್ರಣ ಸಾಧಿಸಿ ಅವುಗಳ ಬಳಕೆಗಾಗಿ ಭರಿಸಲಾಗದಂತಹ ವೆಚ್ಚವನ್ನು ವಿಧಿಸುತ್ತಾರೆ(ಖಂಡಿತವಾಗಿಯೂ ಲಾಭದ ಉದ್ದೇಶದಿಂದ)ಇದು ಸ್ಥಳೀಯ ಸಮುದಾಯಗಳಿಗೆ ಸಾರ್ವಜನಿಕ ಸ್ಥಳಗಳನ್ನು ಹಕ್ಕಿನ ಹೆಸರಲ್ಲಿ ಬಳಸಲು ಅಸಾಧ್ಯವಾಗಿಸುತ್ತದೆ.

ಗುಜರಾತ್‌ನ ಕೇವಾಡಿಯಾದಲ್ಲಿ ಸರ್ದಾರ್ ಸರೋವರ್ ಅಣೆಕಟ್ಟು ನಿರ್ಮಾಣಕ್ಕಾಗಿ ಸಾರ್ವಜನಿಕ ಉದ್ದೇಶದ ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯು ಪ್ರಮಾಣವು ಲೆಕ್ಕಕ್ಕಿಂತ ಹೆಚ್ಚಾಗಿದೆ. ಯೋಜನಾ ಕಾಲನಿ ಮತ್ತು ಇತರ ಅದಕ್ಕೆ ಸಂಬಂಧಿಸ ಕಾರ್ಯಗಳಿಗೆಂದು 1,777 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರೂ, ಅದರಲ್ಲಿ 1400 ಎಕರೆ ಭೂಮಿಯು ಯಾವುದಕ್ಕೂ ಬಳಕೆಯಾಗದೆ ಹಾಗೇ ಉಳಿದಿದೆ. ಸರಕಾರದ ನೀತಿಯ ಪ್ರಕಾರ, ಆದಿವಾಸಿ ಭೂಮಿಯನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಸುವಂತಿಲ್ಲ ಹಾಗೂ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಆದಿವಾಸಿ ಜನಾಂಗಕ್ಕೆ ಹಿಂತಿರುಗಿಸಬೇಕು ಎಂಬುದಾಗಿ ಮೂಲಗಳು ವರದಿ ಮಾಡಿದ್ದವು. ಸರ್ದಾರ್ ಸರೋವರ್ ನರ್ಮದಾ ನಿಗಮ ಲಿಮಿಟೆಡ್(ಎಸ್‌ಎಸ್‌ಎನ್‌ಎನ್‌ಎಲ್) ಈಗ 1400 ಎಕರೆ ಆದಿವಾಸಿ ಭೂಮಿಯ ಹೆಮ್ಮೆಯ ಮಾಲಿಕ! ಸ್ಥಳೀಯ ಪಂಗಡಗಳ ಮತ್ತು ನರ್ಮದಾ ಬಚಾವ್ ಆಂದೋಲನ ಮುಂತಾದ ಜನಾಂದೋಲನಗಳ ವ್ಯಾಪಕ ಪ್ರತಿಭಟನೆಯ ಹೊರತಾಗಿಯೂ, ನೈಸರ್ಗಿಕ ಪಾರ್ಕುಗಳು, ಯೋಜಿತ ಉದ್ಯಾನಗಳು, ಅರಣ್ಯ ಪ್ರದೇಶಗಳು, ನಿಸರ್ಗ ತುಣುಕುಗಳು, ಪರಿಸರ ಸಂಗ್ರಹಾಲಯ, ತನ್ನ ಹೊಸದಾದ ಮತ್ತು ನೈಸರ್ಗಿಕ ಭವ್ಯತೆಯನ್ನು ಹೊಂದಿದ ಪ್ರವಾಸಿಗರನ್ನು ಮನಸೂರೆಗೊಳಿಸುವ ಮತ್ತು ಈ ಯೋಜನೆಯಿಂದ ದೊರಕುವ ಪ್ರಯೋಜನಗಳ ಬಗ್ಗೆ ಬೆರಗನ್ನು ಉಂಟುಮಾಡುವಂತಹ ಬೆಟ್ಟಗಳ ಸಮಗ್ರನೋಟ ಮುಂತಾದವುಗಳೊಂದಿಗೆ, ಹೊಸದಾದ ಮತ್ತು ನಿಸರ್ಗ ವೈಭವವನ್ನು ಹೊಂದಿದ ಅಣೆಕಟ್ಟು ಪ್ರದೇಶವನ್ನು ಒದಗಿಸಲು ಪ್ರಯತ್ನಿಸಲಾಗುತ್ತಿರುವ ತನ್ನ ಪ್ರವಾಸಿ ಯೋಜನೆಗಳೊಂದಿಗೆ(ಅಥವಾ ಅವರ ವೆಬ್‌ಸೈಟ್ ಸೂಚಿಸುವಂತೆ ನಿಸರ್ಗ ಪ್ರವಾಸೋದ್ಯಮ!) ಎಸ್‌ಎಸ್‌ಎನ್‌ಎನ್‌ಎಲ್ ಮುಂದುವರಿಯುತ್ತಲೇ ಇದೆ.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಖಾಸಗಿ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ಭಾರತೀಯ ಯೋಜನಾ ಆಯೋಗ ನೇತೃತ್ವದ ರಾಜ್ಯ ಸರಕಾರವು ಹಿಮಾಚಲ ಪ್ರದೇಶದಲ್ಲಿ(ಇನ್ನು ಮುಂದೆ ಎಚ್‌ಪಿ ಎಂದು ಉಲ್ಲೇಖಿಸಲಾಗುತ್ತದೆ) ವಿಶೇಷವಾಗಿ ಎಚ್‌ಪಿ ಭೂ ಸುಧಾರಣೆ ಕಾಯಿದೆಯ 118ನೇ ವಿಧಿಯಲ್ಲಿ ಭೂ ಕಾಯಿದೆಯನ್ನು ಬದಲಾಯಿಸಿತು. ಇದರಂತೆ ಹಿಮಾಚಲೇತರರು( ರಾಜ್ಯದ ಅನಿವಾಸಿಗಳು) ಯಾವುದೇ ಆಸ್ತಿಯನ್ನು ಖರೀದಿಸುವುದನ್ನು ಮತ್ತು ಮಾರಾಟ ಮಾಡುವುದನ್ನು

ನಿರ್ಬಂಧಿಸಲಾಯಿತು. ಈ ಹಂತವು ಪ್ರವಾಸೋದ್ಯಮ ಕ್ಷೇತ್ರದಲ್ಲಿ ವ್ಯಾಪಕ ಖಾಸಗಿ ಮತ್ತು ವಿದೇಶಿ ಹೂಡಿಕೆಗೆ ಸಜ್ಜಾಗಿದೆ. ಸ್ಥಳೀಯರ ವಿರೋಧ ವ್ಯಕ್ತವಾಗುತ್ತಿದ್ದರೂ, ಸ್ಕೈ ರೆಸಾರ್ಟ್‌ನಿಂದ ಮನರಂಜನಾ ವಲಯದವರೆಗಿನ ಶ್ರೇಣಿಗಳಲ್ಲಿ ವಿವಿಧ ಪ್ರವಾಸೋದ್ಯೋಮ ಯೋಜನೆಗಳ ನಿರ್ಮಾಣಕ್ಕಾಗಿ , ಖಾಸಗಿ ಹೂಡಿಕೆದಾರರಿಗಾಗಿ ಸರಕಾರವು, ಅಥವಾ ಹತೋಟಿಯಿಲ್ಲದ ಬೇನಾಮಿ ವ್ಯವಹಾರಗಳ(ಯಾವುದೇ ನಿರ್ದಿಷ್ಟ ಹೆಸರಿಲ್ಲದೆ, ಸುಳ್ಳು ವ್ಯವಹಾರ) ಮೂಲಕ ಭೂಮಿಯನ್ನು ಸ್ವಾದೀನಪಡಿಸುತ್ತಿದೆ.ತಮ್ಮ ಜೀವನೋಪಾಯ ಮತ್ತು ಜೀವನಾಧಾರಕ್ಕಾಗಿ ಸ್ಥಳೀಯ ಜನರು ಅವಲಂಬಿತವಾಗಿರುವ ನೈಸರ್ಗಿಕ ಸಂಪನ್ಮೂಲಗಳ ಹಾನಿಗೊಳಿಸುವಿಕೆ ಮತ್ತು ವಾತಾವರಣ ಹಾಗೂ ಸ್ಥಳೀಯ ಪಂಗಡಗಳ ಸಾಮಾಜಿಕ

ಮಹಾರಾಷ್ಟ್ರದಲ್ಲಿ ಭಾರತದ ಮೊದಲ ಖಾಸಗಿ ಗಿರಿಧಾಮವು ವೈಭವದ ಜಾಹೀರಾತಿನಲ್ಲಿ ರಾರಾಜಿಸುತ್ತಿದೆ. ಸುಮಾರು 5058 ಹೆಕ್ಟೇರ್ ಪ್ರದೇಶದಲ್ಲಿ ಆವೃತಗೊಳ್ಳುವ ಲಾವಸ ಗಿರಿಧಾಮವನ್ನು ಪಶ್ಚಿಮ ಘಟ್ಟದಲ್ಲಿರುವ ಸರಕಾರಿ ಒಡೆತನದ ವಾರಸ್ಗಾನ್ ಅಣೆಕಟ್ಟಿನ ಹಿನ್ನೀರಿನ ಮೇಲೆ ಸ್ಥಾಪಿಸುತ್ತಾರೆ. ಇಲ್ಲಿ ಗರಿಷ್ಠ ಪ್ರಮಾಣದ ಭೂಮಿಯು ಆದಿವಾಸಿಗಳದ್ದಾಗಿದೆ.ಭೂ ಕಾಯಿದೆಯ ಪ್ರಕಾರ, ಅಂತಹ ಭೂಮಿಯನ್ನು ವರ್ಗಾವಣೆ ಅಥವಾ ಮಾರಾಟ ಮಾಡುವಂತಿಲ್ಲ. ಆದರೆ ಲಾವಸದ ಅಭಿವೃದ್ಧಿಗಾಗಿ ಈ ಭೂಮಿಯನ್ನು ಸ್ವಾಧೀನಪಡಿಸಲು ಸಾಧ್ಯವಾಗುವಂತಹ ವಿಶೇಷ ಸುಧಾರಣೆಯೊಂದನ್ನು ಮಹಾರಾಷ್ಟ್ರ ಸರಕಾರವು ಜಾರಿಗೊಳಿಸಿತು. ನಗರಸಭೆಯು ಈಗಾಗಲೇ ಒಂದು ಖಾಸಗಿ ಅಣೆಕಟ್ಟನ್ನು ನಿರ್ಮಿಸಿದ್ದು, ಅಣೆಕಟ್ಟಿನ ಕೆಳಭಾಗದಲ್ಲಿ ನೀರು ಲಭ್ಯವಾಗುವುದಿಲ್ಲ. ಕುಡಿಯಲು ಮತ್ತು ವ್ಯವಸಾಯಕ್ಕೆ ನೀರಿಲ್ಲದೆ ರೈತರು ತೊಂದರೆಯನ್ನು ಎದುರಿಸುತ್ತಿದ್ದಾರೆ. ಸ್ಥಳೀಯ ಮೂಲಗಳ ಪ್ರಕಾರ, ಖಾಸಗಿ ಅಭಿವರ್ಧಕರ ಬಲವಂತದ ಸ್ವಾಧೀನತೆಯು ಸ್ಥಳೀಯ ಪಂಗಡಗಳ ಪ್ರತಿಭಟನೆಗೆ ಕಾರಣವಾಗಿದೆ.ಲಾವಸದಲ್ಲಿನ ಭೂ ಒಪ್ಪಂದದ ಕುರಿತಂತೆ ತನಿಖೆ ನಡೆಸಲು ಸಮಿತಿಯೊಂದನ್ನು ನೇಮಿಸುವಂತೆ ಭಾರತೀಯ ಸರಕಾರವನ್ನು ಒತ್ತಾಯಿಸಲಾಗಿದೆ.

ಬೆಂಗಳೂರು, ಲಾವಸ, ಎಚ್‌ಪಿ ಅಥವಾ ಕೇವಾಡಿಯ ಮುಂತಾದ ಕಡೆಗಳಲ್ಲಿನ ಪ್ರತಿಭಟನಾ ಗುಂಪುಗಳ ಬಗ್ಗೆ ಜನರಿಗೆ ತಿಳಿದಿಲ್ಲ ಎಂದೇನಲ್ಲ. ಅನೇಕ ಜನರ ಜೀವನಾಧಾರವಾಗಿರುವ ಭೂಮಿಯನ್ನು ಸ್ವಾಧೀನಪಡಿಸುವ ಮತ್ತು ಹರಾಜು ಹಾಕುವ ಹಾಗೂ, ಅದನ್ನು ಪ್ರವಾಸೋದ್ಯಮದಂತಹ ವಾಣಿಜ್ಯ ಚಟುವಟಿಕೆಗಳಿಗೆ ವಿನಿಯೋಗಿಸುವ ರಾಜ್ಯ ಸರಕಾರಗಳ ಕ್ರಮದ ವಿರುದ್ಧ ನಡೆಯುತ್ತಿರುವ ದೇಶವ್ಯಾಪಿ ಪ್ರತಿಭಟನೆಯು ಈಗಾಗಲೇ ಬೆಳಕಿಗೆ ಬಂದಿದೆ.

## ಪ್ರವಾಸೋದ್ಯಮದ ನೈಜ ಮುಖ:

ಪ್ರವಾಸೋದ್ಯಮವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಒಂದು ಉತ್ತಮ ಉದ್ಯಮವಾಗಿದೆ ಯಾಕೆಂದರೆ ಪ್ರವಾಸೋದ್ಯಮವು ಒಂದು ಪ್ರಮುಖವಾದ ಉದ್ಯೋಗ ಸೃಷ್ಟಿಯ ಮೂಲವಾಗಿದೆ ಎಂಬುದಾಗಿ ವಿಶ್ವ ಸಂಸ್ಥೆಯ ವಿಶ್ವ ಪ್ರವಾಸೋದ್ಯಮ ಒಕ್ಕೂಟವು ಪ್ರತಿಪಾದಿಸುತ್ತದೆ. ಸ್ಥಳೀಯ ಜನರ ಜೀವನ ಸ್ಥಿತಿಯನ್ನು ಅಭಿವೃದ್ಧಿಪಡಿಸುವಲ್ಲಿ ಹೆಚ್ಚು ಸಹಾಯಕವಾಗುವಂತಹ ಮೂಲಭೂತ ವ್ಯವಸ್ಥೆಯಲ್ಲಿ ಅಗಾಧ ಪ್ರಮಾಣದ ಹೂಡಿಕೆಗೆ ಇದು ಉತ್ತೇಜಿಸುತ್ತದೆ. ಇದು ಸರಕಾರಕ್ಕೆ ಸಾಕಷ್ಟು ತೆರಿಗೆ ಆದಾಯವನ್ನು ನೀಡುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಿರ್ಮಾಣಗೊಂಡ ಹೆಚ್ಚಿನ ನೂತನ ಪ್ರವಾಸೋದ್ಯಮ ಉದ್ಯೋಗಗಳು ಮತ್ತು ವ್ಯವಹಾರಗಳು, ಆರ್ಥಿಕ ಅವಕಾಶಗಳನ್ನು ಸರಿದೂಗಿಸಲು ಮತ್ತು ಸ್ಥಳೀಯ ನಿವಾಸಿಗಳು ಜನನಿಬಿಡ ನಗರಗಳಿಗೆ ಹೋಗುವುದನ್ನು ತಪ್ಪಿಸಲು ಸಹಕಾರಿಯಾಗಿದೆ.

ಪ್ರವಾಸೋದ್ಯಮವು ತನ್ನ ಪ್ರಾರಂಭಿಕ ಅಂಶಗಳು ಹಾಗೂ ವಿವಿಧ ಆಯಾಮಗಳಿಂದಾಗಿ ಅಭಿವೃದ್ಧಿಯ ವೇಗವರ್ಧಕ ಎಂಬುದಾಗಿ ಅನೇಕ ಬಾರಿ ನಿರೂಪಿಸಲ್ಪಟ್ಟಿತ್ತು. ಆದರೆ, ಪ್ರವಾಸೋದ್ಯಮದ ಹೆಜ್ಜೆಗುರುತಿನ ವಾಸ್ತವತೆಯೇ, ಸಮಾಜವನ್ನು ದಾರಿದ್ರ್ಯಕ್ಕೆ ತಳ್ಳುವ ಒಂದು ಅಂಶವಾಗಿ ಪರಿಣಮಿಸಿದೆ ಎಂಬುದು ಅತ್ಯಂತ ಬೇಸರದ ಸಂಗತಿಯಾಗಿದೆ. ಪ್ರವಾಸೋದ್ಯಮವು ಅಧಿಕ ಸಂಪನ್ಮೂಲ ಕೇಂದ್ರ ಮತ್ತು ಸಂಪನ್ಮೂಲ ವಿಫುಲ ಎಂಬುದು ಅನುಭವದ ಆಧಾರದಲ್ಲಿ ತಿಳಿದುಬಂದ ವಾಸ್ತವವಾಗಿದೆ. ಇದು ಹೆಚ್ಚು ಆರ್ಥಿಕ, ಸಾಮಾಜಿಕ, ದೈಹಿಕ ಸಂಪನ್ಮೂಲಗಳನ್ನು ಬಳಸಿಕೊಂಡು, ಉಪಯೋಗಿಸಿಕೊಂಡು. ಹೆಚ್ಚಿನ ಸಂದರ್ಭಗಳಲ್ಲಿ ಸ್ಥಳೀಯ ಪಂಗಡಗಳ ಅಗತ್ಯತೆಗಳೊಂದಿಗೆ ಸ್ಪರ್ಧೆ ನೀಡುತ್ತಿದೆ. ಇದರ ಫಲವಾಗಿ, ಜನರ ಮುಖ್ಯ ಅಗತ್ಯತೆಗಳಾದ ಕೃಷಿ ಭೂಮಿಯನ್ನು ಒಂದು ಮಾಡಿ, ನಿಸರ್ಗ ಮತ್ತು ಸಾಮಾನ್ಯ ನೈಸರ್ಗಿಕ ಆಸ್ತಿಗಳಾದ ಅರಣ್ಯ, ಹುಲ್ಲುಗಾವಲು, ಬೀಚ್‌ಗಳು, ಸಾಗರಗಳು ಮತ್ತು ಕೆರೆಗಳು ಮುಂತಾದವುಗಳನ್ನು ಸಾಧ್ಯವಾಗಿಸುತ್ತದೆ. ಪ್ರವಾಸೋದ್ಯಮ ಸಂಸ್ಥೆಗಳಾದ ಹೋಟೇಲ್, ರೆಸಾರ್ಟ್, ಅಮ್ಯೂಸ್‌ಮೆಂಟ್ ಪಾರ್ಕ್, ಗಾಲ್ಫ್ ಕೋರ್ಸಸ್ ಮುಂತಾದವುಗಳಿಗೆ ವಿದ್ಯುತ್ ಪೂರೈಸಲು ನೀರನ್ನು ಒಟ್ಟುಮಾಡುವಲ್ಲಿ ಇದು ದಾರಿಮಾಡಿಕೊಡುತ್ತದೆ. ಇದರಿಂದಾಗಿ, ಸ್ಥಳೀಯ ಪಂಗಡಗಳು ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸ್ಥಳೀಯ ಒಡೆತನ, ನಿಯಂತ್ರಣ ಮತ್ತು ಹಿಡಿತವನ್ನು ಕಳೆದುಕೊಳ್ಳುವಂತಾಗುತ್ತದೆ.

ಪ್ರವಾಸೋದ್ಯಮವು ಸಹಜವಾಗಿಯೇ ಲಾಭ ಗಳಿಕೆಯ ಉದ್ದೇಶವನ್ನು ಹೊಂದಿದೆ. ಸ್ಥಳೀಯ ಜನರ ಭೂಮಿಯನ್ನು ದೊಡ್ಡ ಹೋಟೇಲ್‌ಗಳಿಗೆ ನಿಯೋಜಿಸಲಾಗಿದ್ದು, ಇದು ಸ್ಥಳೀಯರ ಸ್ಥಳಾಂತರಕ್ಕೆ ಹಾದಿ ಮಾಡಿಕೊಡುತ್ತದೆ. ಪರಿಣಾಮವಾಗಿ, ತಮ್ಮ ಜೀವನಾಧಾರವಾಗಿರುವ ನೈಸರ್ಗಿಸ ಸಂಪನ್ಮೂಲಗಳ ಮೇಲಿನ ಹಕ್ಕುಗಳನ್ನು ಕಳೆದುಕೊಳ್ಳುವುದರೊಂದಿಗೆ, ಆ ಪ್ರದೇಶದಿಂದಲೇ ಸ್ಥಳಾಂತರಗೊಳ್ಳುವುದರಿಂದ ಸಾಕಷ್ಟು ನಷ್ಟ ಉಂಟಾಗುತ್ತದೆ. ಮುಕ್ತ ಪ್ರವಾಸೋದ್ಯಮದಲ್ಲಿ ಅಭಿವೃದ್ಧಿ ಸಾಧಿಸಿರುವ ಹೆಚ್ಚಿನ ಪ್ರವಾಸೋದ್ಯಮ ಸ್ಥಳಗಳು, ಸ್ಥಳೀಯ ಪಂಗಡಗಳ ಮೇಲೆ ಬೀರಿರುವ ಪ್ರಭಾವವು 'ಬಲವಂತದಿಂದ ವಶಪಡಿಸಿಕೊಂಡಿರುವುದು'ಎಂಬುದಾಗಿ ಸ್ಥಳೀಯರು ಆರೋಪಿಸುತ್ತಾರೆ.ಸ್ಟಾರ್ ಹೋಟೇಲ್‌ಗಳು, ರೆಸಾರ್ಟ್/ಮನರಂಜನಾ ಪಾರ್ಕ್‌ಗಳು, ಸ್ಥಳೀಯರು ಬಳಸಿಕೊಂಡು ಬರುತ್ತಿದ್ದ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಸಾಧಿಸುತ್ತಿವೆ ಎಂಬ ವಾಸ್ತವತೆಯು ಜನರ ಭಾವನೆಗಳ ಮೇಲೆ ಒತ್ತಡ ಹೇರುತ್ತಿದೆ. ಸರಕಾರವು ಈ ಸಂಪನ್ಮೂಲಗಳನ್ನು ಖಾಸಗೀಕರಣಗೊಳಿಸಿ ಸ್ಥಳೀಯ ರಿಗೆ ಅದನ್ನು ಮಾರಲು ಅವಕಾಶ ನೀಡುತ್ತದೆ.ಒಂದು ಕಾಲದಲ್ಲಿ ಸ್ಥಳೀಯರಿಗೆ ಸಾರ್ವಜನಿಕವಾಗಿ

ದೊರೆಯುತ್ತಿದ್ದ ಕರಾವಳಿ ಪ್ರದೇಶದಲ್ಲಿನ ಬೀಚ್‌ಗಳು, ನೈಸರ್ಗಿಕ ನೀರಿನ ಹರಿವು, ಗುಡ್ಡ ಪ್ರದೇಶಗಳಲ್ಲಿರುವ ಬುಗಿಯಾಲ್‌ಗಳು( ಸುತ್ತುವರಿದಿರುವ ಗ್ರಾಮಗಳ ಸಾಮಾನ್ಯ ನೈಸರ್ಗಿಕ ಆಸ್ತಿಯಾಗಿರುವ ಹುಲ್ಲುಗಾವಲು ಪ್ರದೇಶಗಳು) ಇವುಗಳನ್ನು ಖಾಸಗಿ ಸ್ಥಳಗಳಾಗಿ ಪರಿವರ್ತಿಸಲಾಗುತ್ತಿದೆ. ಹೋಟೇಲ್‌ಗಳು, ಗಾಲ್ಫ್ ಕೋರ್ಸ್‌ಗಳು, ರೆಸಾರ್ಟ್‌ಗಳು, ಪ್ರವಾಸಿತಾಣಗಳು ಹಾಗೂ ಮನರಂಜನಾ ಪಾರ್ಕುಗಳಲ್ಲಿನ ಅಧಿಕ ನೀರಿನ ಬೇಡಿಕೆಯು, ಸ್ಥಳೀಯ ಗ್ರಾಮಗಳಿಗೆ, ರೈತರಿಗೆ ಮತ್ತು ಮನೆಗಳಿಗೆ ನೀರಿನ ಕೊರತೆಯನ್ನು ಉಂಟುಮಾಡಿದೆ. ಆಹಾರ ಉತ್ಪಾದನೆಯ ಮೇಲೆ ತೀವ್ರ ರೀತಿಯ ಪರಿಣಾಮವನ್ನು ಬೀರಿದ್ದು, ಇದರ ಫಲವಾಗಿ ತಮ್ಮ ಕುಟುಂಬಗಳಿಗೆ ಅಗತ್ಯವಿರುವ ಆಹಾರ ಮತ್ತು ನೀರನ್ನು ಸಂಗ್ರಹಿಸುವ ಕಾರ್ಯದ ಹೊಣೆಯೊಂದಿಗೆ, ಸ್ಥಳೀಯ ಪಂಗಡಗಳ ಮಹಿಳೆಯರು, ಮಕ್ಕಳು, ಮತ್ತು ವೃದ್ಧರ ಕೆಲಸದ ಹೊರೆಯು ಹೆಚ್ಚಾಗಿದೆ. ಈವರೆಗೆಗೆ ಖಾಸಗೀಕರಣಗೊಳ್ಳದ ಪ್ರದೇಶಗಳಿಂದ ದಿನನಿತ್ಯದ ಆಹಾರ ಮತ್ತು ನೀರನ್ನು ಸಂಗ್ರಹಿಸುವ ಕಾರ್ಯದಲ್ಲೇ ಸ್ಥಳೀಯ ಪಂಗಡಗಳು ತಮ್ಮ ಸಮಯ ಹಾಗೂ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿವೆ.

ನೈಸರ್ಗಿಕ ಸಂಪನ್ಮೂಲಗಳ ಕುಗ್ಗುವಿಕೆ ಮತ್ತು ವಿಶ್ವದ ಅನೇಕ ಪ್ರದೇಶಗಳಲ್ಲಿ ದಿನನಿತ್ಯದ ಕಾರ್ಯಗಳಲ್ಲಿ ಮಹಿಳೆಯ ಮೇಲೆ ಬೀಳುವ ಹೊರೆಯ ವರ್ಧನೆಯ ನಡುವೆ ನೇರ ಸಂಬಂಧವಿದೆ ಎಂಬುದು ಗಮನಾರ್ಹ ಅಂಶವಾಗಿದೆ. ಪ್ರವಾಸೋದ್ಯಮವು ಸ್ಥಳೀಯರಿಗೆ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ನಿರ್ಬಂಧಿಸಿದಾಗ ಅಥವಾ ನೈಸರ್ಗಿಸ ಸಂಪನ್ಮೂಲಗಳ ಕುಗ್ಗುವಿಕೆಯಲ್ಲಿ ತನ್ನ ಕೊಡುಗೆಯನ್ನು ನೀಡಿದಾಗ, ಮಹಿಳೆಯು ಹೆಚ್ಚು ತೊಂದರೆಗೊಳಪಡುತ್ತಾರೆ. ತಮ್ಮ ದಿನನಿತ್ಯದ ಕಾರ್ಯಗಳಿಗಾಗಿ ಕಾಡಿನ ಉತ್ಪನ್ನಗಳನ್ನು ನೀರನ್ನು ಯಥೇಚ್ಛವಾಗಿ ಮಹಿಳೆಯು ಉಪಯೋಗಿಸುತ್ತಿದ್ದು, ಯಾವಾಗ ತಮ್ಮಜೀವನೋಪಾಯಕ್ಕಾಗಿ ಬಳಸಿಕೊಳ್ಳುತ್ತಿದ್ದ ಸಂಪನ್ಮೂಲಗಳ ಮೇಲೆ ಪ್ರವಾಸೋದ್ಯಮವು ದಬ್ಬಾಳಿಕೆ ನಡೆಸಿತೋ ಆವಾಗ ಬಿಕ್ಕಟ್ಟು ತಲೆದೋರಿತು. ಹವಾಮಾನ ವೈಪರೀತ್ಯ ಮತ್ತು ಪ್ರವಾಸೋದ್ಯಮದ ನಡುವಿನ ನೇರ ಸಂಬಂಧವು ಪ್ರವಾಸೋದ್ಯಮದಿಂದಾಗಿ ಮಹಿಳೆಯು ಪಡಬೇಕಾದ ಕಷ್ಟಗಳನ್ನು ಮತ್ತೆ ದೃಢಪಡಿಸುತ್ತದೆ. ಪ್ರವಾಸೋದ್ಯಮವು ಜನರನ್ನು ಸಾಂಪ್ರಾದಾಯಿಕ ಜೀವನೋಪಾಯದಿಂದ ಮತ್ತು ಅವರ ಪ್ರದೇಶಗಳಿಂದ ಸ್ಥಳಾಂತರಗೊಳಿಸಿದ, ಉಪ ಕಸುಬಿನ ಮೂಲಕ ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಭಾಗಿಯಾಗಿದ್ದ ಮಹಿಳೆ ಹಾಗೂ ಮಕ್ಕಳ ಮೇಲೆ ಇದು ಹೆಚ್ಚಿನ ರೀತಿಯ ಪರಿಣಾಮವನ್ನು ಬೀರಿತು. ನಿರ್ದಿಷ್ಟ ಚಟುವಟಿಕೆಯಿಂದ ಇತರ ಕಡೆಗೆ ಅಂದರೆ ಕೃಷಿಯಿಂದ ಬೇರೆಡೆಗಿನ ಬದಲಾವಣೆಯು ಆಹಾರ ಸುರಕ್ಷತೆಯ ಮೇಲೆ ಪ್ರಭಾವ ಬೀರುತ್ತದೆ. ಕೇರಳದ ಕುಮಾರಕೋಮ್‌ನ ಅಧ್ಯಯನದ ವರದಿಗಳು ಹೇಳುವಂತೆ, ಹೆಚ್ಚಿನ ದಿನಕೂಲಿ ಸಿಗುವ ಕಾರಣ ಮಹಿಳೆಯರು ಕೃಷಿಯಿಂದ ಪ್ರವಾಸೋದ್ಯಮ ನಿರ್ಮಾಣ ಸಂಬಂಧಿ ಕಾರ್ಯಗಳಿಗೆ ತೆರಳುತ್ತಾರೆ. ಆದರೆ, ಕೃಷಿಯ ಮೇಲಿನ ನಿರ್ಲ್ಯಕ್ಷತನ ಮತ್ತು ಪ್ರವಾಸೋದ್ಯಮ ನಿರ್ಮಾಣ ಕಾರ್ಯವು ಕೇವಲ ಕಿರುಹಿಂತದ್ದಾದ ಕಾರಣ ಅವರು ಎರಡೂ ಕೆಲಸವನ್ನು ಕಳೆದುಕೊಳ್ಳುತ್ತಾರೆ ಮತ್ತು ಕಳೆಗಳಿಂದ ತುಂಬಿ ಹೋದ ಕೃಷಿ ಭೂಮಿಯಲ್ಲಿ ಕಟಾವು ನಡೆಸಲು ಅಸಾಧ್ಯವಾಗುತ್ತದೆ.

ಪ್ರವಾಸೋದ್ಯಮವು ಒಂದು ಕ್ರಮಬದ್ಧವಲ್ಲದ ಕ್ಷೇತ್ರವಾಗಿದೆ. ಇದು ಜನರ ಸ್ಥಳಾಂತರ, ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ನಿರ್ಬಂಧ, ಮತ್ತು ಅನೇಕ ಜನರ ಜೀವಾನಾಧಾರದ ಮೇಲೆ ಪರಿಣಾಮ ಬೀರುತ್ತದೆ. ರಜಾದಿನಗಳ ಮನರಂಜನೆಯನ್ನು ಬಯಸುವ ಜಗತ್ತಿನ ಶ್ರೀಮಂತರು ಸ್ಥಳೀಯರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಅಸಮರ್ಥರಾಗಿರುವ ಕಾರಣ, ಹೆಚ್ಚಿನ ಅಭಿವೃದ್ಧಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ಪ್ರವಾಸೋದ್ಯಮವು ವಿಲಾಸ ಮತ್ತು ಮನರಂಜನಾ ಪ್ರದೇಶಗಳ ನಿರ್ಮಾಣದಲ್ಲಿ ಅನೇಕ ಪರಿಣಾಮಗಳನ್ನು ಎದುರಿಸುತ್ತಿದೆ. ಜೊತೆಗೆ ಹೊಂದಿರುವವರ ಮತ್ತು ಹೊಂದದೇ ಇರುವವರ ನಡುವಿನ ಅಂತರವನ್ನು ಇದು ಇನ್ನಷ್ಟು ಹೆಚ್ಚಿಸುತ್ತಿದೆ.

## ಯೋಜನೆಯವರಿಗೆ-ಪ್ರವಾಸೋದ್ಯಮ ಯೋಜನೆಯಲ್ಲಿನ ವಿನಾಶಕಾರಿ ವಿಕೇಂದ್ರೀಕರಣ

ಭಾರತದಲ್ಲಿ ಪ್ರತಿ ಐದು ವರ್ಷದ ಯೋಜಿತ ಅಭಿವೃದ್ಧಿಯ ನಕ್ಷೆಯನ್ನು ಭಾರತೀಯ ಯೋಜನಾ ಆಯೋಗವು ನಿರ್ವಹಿಸುತ್ತದೆ. ಭಾರತದ ಮೊದಲ ಪ್ರಧಾನಮಂತ್ರಿ ಪಂಡಿತ್ ಜವಹರಲಾಲ್ ನೆಹರೂರವರು ಆರ್ಥಿಕ ಅಭಿವೃದ್ಧಿಯ ಮಾದರಿಯನ್ನು ಮೊದಲ ಸೋವಿಯತ್ ಒಕ್ಕೂಟದಿಂದ 1950ರಲ್ಲಿ ಪಡೆದುಕೊಂಡಿದ್ದರು. ಯೋಜನಾ ಆಯೋಗವು ಯಾವುದೇ ಮಂತ್ರಿಮಂಡಲದಿಂದ ಮುಕ್ತವಾಗಿದ್ದು, ಆಯೋಗದ ಮುಖ್ಯಸ್ಥರೂ ಆಗಿರುವ ಭಾರತದ ಪ್ರದಾನಮಂತ್ರಿಗಳ ಮಾತ್ರವೇ ಇದಕ್ಕೆ ಹೊಣೆಯಾಗಿರುತ್ತಾರೆ. ಪಂಚವಾರ್ಷಿಕ ಯೋಜನೆಯ ಉಪಯೋಗಗಳ ಬಗ್ಗೆ ಅನೇಕ ಬಾರಿ ಪ್ರಶ್ನಿಸಲಾಗಿದ್ದರೂ, ಸರಕಾರದ ಮತ್ತು ನಿಯಮ ಆದ್ಯತೆಗಳ ಉದ್ದೇಶವನ್ನು ನಿರ್ಧರಿಸುವಲ್ಲಿ ಪಂಚವಾರ್ಷಿಕ ಯೋಜನೆಯು ಈಗಲೂ ಒಂದು ಉತ್ತಮ ಮಾನದಂಡವಾಗಿದೆ.

ಗ್ರಾಮೀಣ ಮಟ್ಟದಲ್ಲಿ ಸ್ಥಳೀಯ ಸ್ವ ಆಡಳಿತ ಸಂಸ್ಥೆಗಳಿಗೆ ಕೆಲವು ಆಡಳಿತ ಕಾರ್ಯಗಳನ್ನು ವಿಕೇಂದ್ರಿಕರಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಭಾರತೀಯ ಸಂವಿಧಾನವು ಅಧಿಕೃತ ಆದೇಶ ನೀಡುತ್ತದೆ. ಪ್ರಾರಂಭದಲ್ಲಿ ಇದು ಸಂವಿಧಾನಿಕವಾಗಿ ಆದೇಶಕ್ಕೊಳಪಡುತ್ತಿರಲಿಲ್ಲ. ಆದರೆ, ಮುಂದೆ ಇದರ ಅಗತ್ಯತೆಯನ್ನು ಮನಗಂಡ ಸಾಮಾನ್ಯ ಜನತೆಯು ಏಕರೂಪದ ಮತ್ತು ದೃಢ ಅಧಿಕಾರವನ್ನು ಒದಗಿಸುವ ಮತ್ತು ಎಎಸ್‌ಜಿಐಗೆ ಅಧಿಕಾರವನ್ನು ನೀಡುವ ಯೋಜನೆಯನ್ನು ರೂಪಿಸಲಾಯಿತು. ಇದು ಭಾರತದಲ್ಲಿ ಜನಸಾಮಾನ್ಯರ ಪ್ರಜಾಪ್ರಭುತ್ವ ಸಂಸ್ಥೆಯ ಅರಳುವಿಕೆಯಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿತು. ಸ್ಥಳೀಯ ಅಗತ್ಯತೆಗಳ ಮತ್ತು ಸಂಪನ್ಮೂಲಗಳ ಆಧಾರದಲ್ಲಿ ಯೋಜನೆಯನ್ನು ರೂಪಿಸಲು ಜನರಿಗೆ ಅಧಿಕಾರ ನೀಡುವಲ್ಲಿ ಜನಸಾಮಾನ್ಯರಲ್ಲಿ ಸಾಮಾಜಿಕ ಸಮಾನತೆಯನ್ನು ಉಂಟುಮಾಡುವುದು ಇದರ ಮುಖ್ಯ ಉದ್ದೇಶವಾಗಿತ್ತು. ಆದ್ದರಿಂದ ಆರ್ಥಿಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರ ಸಹಭಾಗಿತ್ವವನ್ನು ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸುವ ಭರವಸೆಯನ್ನು ಇದು ನೀಡುತ್ತದೆ.

ಭಾರತದ ಸಂವಿಧಾನದ 244ನೇ ನಿಯಮದಲ್ಲಿ ತನ್ನ 5ನೇ ಅನುಬಂಧದ ಮೂಲಕ ಬುಡಗಟ್ಟು ಪ್ರದೇಶದಲ್ಲಿ ವಾಸಿಸುವ ಆದಿವಾಸಿಗಳಿಗೆ ಇದು ರಕ್ಷಣೆಯನ್ನು ನೀಡುತ್ತದೆ. ಮತ್ತು ಸ್ವಆಡಳಿತದ ಹಕ್ಕನ್ನು ಒದಗಿಸುತ್ತದೆ. 5ನೇ ಅನುಬಂಧದ ಮೂಲಕ ಮತ್ತು ಪಂಚಾಯತ್ ಕಾಯಿದೆ 1996 (ಬುಡಗಟ್ಟು ಪ್ರದೇಶದ ವೃದ್ಧಿ) ಮೂಲಕ

ಭಾರತೀಯ ಸಂವಿಧಾನವು ಆದಿವಾಸಿಗಳ ಪ್ರಾದೇಶಿಕ ಅಖಂಡತೆಗೆ ಮತ್ತು ಅಭಿವೃದ್ಧಿಯಲ್ಲಿ ತಮ್ಮದೇ ಹಾದಿಯನ್ನು ನಿರ್ಧರಿಸುವ ಹಕ್ಕನ್ನು ಕಡ್ಡಾಯಗೊಳಿಸಿದೆ.ಇದು ಆದಿವಾಸಿಗಳ ಭೂಮಿಯನ್ನು ವಾಣಿಜ್ಯ ಕೆಲಸಗಳಿಗೆ ಮತ್ತು ಇತರರರಿಗೆ ವರ್ಗಾಯಿಸುವುದನ್ನು ವಿರೋಧಿಸುತ್ತದೆ.

ಯೋಜನಾ ಆಯೋಗದ ಹೊಣೆಯನ್ನು ಜನರಿಗೆ ಒಪ್ಪಿಸಬೇಕಾದ ಸಂದರ್ಭ ಕೂಡಿಬರುತ್ತದೆ ಎಂಬುದಾಗಿ ಭಾರತದ ಪಂಚವಾರ್ಷಿಕ ಯೋಜನೆಯ ನಿರ್ಮಾತೃ ಪಂಡಿತ್ ಜವಹರಲಾಲ್ ನೆಹರು ಅವರು ಹೇಳಿದ್ದರು. ಭಾರತದ ಪ್ರತಿ ಭಾಗದಲ್ಲೂ ಈ ಹೊಣೆಯನ್ನು ಜನರಿಗೇ ನೀಡಿದಲ್ಲಿ ಇದು ಉತ್ತಮ ಫಲಿತಾಂಶವನ್ನು ನೀಡುತ್ತದೆ ಎಂಬ ಸಂಪೂರ್ಣ ಭರವಸೆಯನ್ನು ನಾನು ಹೊಂದಿದ್ದೇನೆ ಎಂದು ಅವರು ಅಭಿಪ್ರಾಯಪಟ್ಟಿದ್ದರು.ನಿರ್ಧಾರ ಕೈಗೊಳ್ಳುವಲ್ಲಿ ಇಂದಿನ ಯೋಜನಾ ಪ್ರಕ್ರಿಯೆಯು ವಿಕೇಂದ್ರೀಕರಣದ ಬೆಳವಣಿಗೆಯ ಪ್ರವೃತ್ತಿಯಾಗಿದೆ.ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ, ಅಭಿವೃದ್ಧಿಪಡಿಸಿ, ವೃದ್ಧಿಸಿದರೆ ಲಾಭದಾಯಕವಾದುದು ಎಂಬುದಾಗಿ ಸರಕಾರವು ಕಂಡುಕೊಂಡ ಭೂಮಿಯನ್ನು ಅಭಿವೃದ್ಧಿ ಪ್ರಾಧಿಕಾರ/ಸಮಿತಿಗಳ ಅಧೀನದಲ್ಲಿ ಅದರ ಮೇಲೆ ಆಡಳಿತ ನಡೆಸುವ ಪ್ರವೃತ್ತಿಯು ಹೆಚ್ಚಾಗುತ್ತಿದೆ. ಕೇರಳ ಪ್ರವಾಸೋದ್ಯಮ ಕಾಯಿದೆ 2005(ಪ್ರದೇಶಗಳ ರಕ್ಷಣೆ ಮತ್ತು ಸಂರಕ್ಷಣೆ) ನ್ನುಕಾರ್ಯಗತಗೊಳಿಸುವ ಮೂಲಕ ಪ್ರವಾಸೋದ್ಯಮ ರಕ್ಷಣೆ ಮತ್ತು ಸಂರಕ್ಷಣಾ ಸಮಿತಿಯನ್ನು ರಚನೆ, ಆಂಧ್ರಪ್ರದೇಶದಲ್ಲಿ ಅಭಿವೃದ್ಧಿ ಪ್ರಾಧಿಕಾರ(ಕೊಲ್ಲೇರು ಕೆರೆ), ಒರಿಸ್ಸಾ(ಚಿಲ್ಕ ಕೆರೆ), ರಾಜಸ್ಥಾನ(ಜೈಪುರ ಮತ್ತು ಅಂಬೇರ್ ಕೋಟೆ ಮತ್ತು ಕೆಲ್ವಿದ ಕಾಲನಿ(ಗುಜರಾತ್) ಇವು ಈ ಬೆಳವಣಿಗೆ ಪ್ರವೃತ್ತಿಯ ಪ್ರಮುಖ ಉದಾಹರಣೆಗಳು. ಈ ಸ್ವರೂಪವು ಹೀಗೆಯೇ ಉಳಿದುಕೊಂಡಿದೆ. ಇದು ಸ್ಥಳೀಯ ಸ್ವ ಆಡಳಿತ ಸಂಸ್ಥೆ(ಎಲ್‌ಎಸ್‌ಜಿಐ)ಯಿಂದ ಸಮಾಜದಿಂದ ಸ್ವಲ್ಪವೇ ಅಥವಾ ಯಾವುದೇ ಪ್ರಾತಿನಿಧ್ಯವನ್ನು ಹೊಂದಿರದ ಸಮಿತಿ/ಪ್ರಾಧಿಕಾರಕ್ಕೆ ಆಡಳಿತ ಹಸ್ತಾಂತರಕ್ಕೆ ಎಣೆ ಮಾಡಿಕೊಡುತ್ತದೆ.ಸಾಂವಿಧಾನಿಕ ಅಧಿಕೃತ ಆದೇಶದ ವಿಕೇಂದ್ರೀಕರಣ ಪ್ರಕ್ರಿಯೆಯ ಹಿಮ್ಮುಖ ಧೋರಣೆಯು, ಪ್ರದೇಶವು ಬುಡಗಟ್ಟು ಪ್ರದೇಶವೆಂದು ಪರಿಗಣಿಸಲ್ಪಟ್ಟಿದೆಯೋ ಇಲ್ಲವೋ ಎಂಬುದನ್ನು ಗಮನಿಸದೇ ಇರುವ ಪ್ರವೃತ್ತಿಯು ಮುಂದುವರಿಯುತ್ತದೆ.ಇದು ಸರಕಾರದ ವಿಕೇಂದ್ರೀಕರಣ ವ್ಯವಸ್ಥೆಯನ್ನು ವಿಫಲಗೊಳಿಸುತ್ತದೆ ಮತ್ತು ಸ್ಥಳೀಯ ಅಭಿವೃದ್ಧಿ ವಿಚಾರಗಳಿಗೆ ಸಂಬಂಧಿಸಿದ ಯೋಜನಾ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಜನರಿಗೆ ಜನಸಾಮಾನ್ಯ ಹಕ್ಕನ್ನು ನೀಡುತ್ತದೆ.ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್(ಎಡಿಬಿ)ನಂತಹ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು(ಇನ್ನು ಮುಂದೆ ಐಎಫ್‌ಐ ಎಂದು ಉಲ್ಲೇಖಿಸಲಾಗುತ್ತದೆ) ಅಭಿವೃದ್ಧಿ ಪ್ರಾಧಿಕಾರಕ್ಕೆ/ಸಮಿತಿಗೆ ಅಧಿಕಾರದ ಹಸ್ತಾಂತರಿಸುವುದನ್ನು ಬೆಂಬಲಿಸಿದೆ.ಅದರ ಪ್ರಕಾರ, ಸ್ಥಳೀಯ ಸ್ವ ಆಡಳಿತ ಸಂಸ್ಥೆಗಳು ಮಾತ್ರವೇ ದೇಶದಲ್ಲಿ ಸಂಯುಕ್ತ ಮತ್ತು ಬಹುಸ್ತರ ಆಡಳಿತವನ್ನು ಸ್ಥಾಪಿಸಲಬಲ್ಲವು.ಇದು ಅನುಮತಿಯನ್ನು ಮುಂದೂಡುತ್ತದೆ ಆದ್ದರಿಂದ ಒಟ್ಟು ಯೋಜನೆಯ ವೆಚ್ಚವು ಏರಿಕೆಯಾಗುತ್ತದೆ. ಈಶಾನ್ಯ ರಾಜ್ಯಗಳಲ್ಲಿ ಎಡಿಬಿಯು ಕಾನೂನು ಮತ್ತು ಸಾರ್ವಜನಿಕ ಆಡಳಿತಕ್ಕೆ ಶೇ.5ರಷ್ಟು ಸಾಲವನ್ನು ನೀಡುತ್ತದೆ:ಕಾನೂನು ಸುಧಾರಣೆಗಳ ವಿಶ್ವ ಬ್ಯಾಂಕ್/ಎಡಿಬಿಯಿಂದ ಪ್ರಸ್ತಾಪಿಸಲ್ಪಡುತ್ತದೆ.ಆಡಳಿತ ಸುಧಾರಣೆಗಳನ್ನು ಪಡೆಯಲು ಶ್ರಮಿಸಲಾಗುತ್ತದೆ.ಇದು ಭಾರತೀಯ ಆಡಳಿತ ಸೇವಾ ಅಧಿಕಾರಿಗಳ ತರಬೇತಿಯನ್ನು ಒಳಗೊಂಡಿದೆ.ನಿರ್ದಿಷ್ಟ ಪ್ರದೇಶಗಳಲ್ಲಿ ಎಲ್ಲಾ ಆಡಳಿತ ಅಧಿಕಾರಿಗಳೊಂದಿಗೆ ಭರವಸೆಯಿಡುವಂತಹ ನಿಯಂತ್ರಣ ಪ್ರಾಧಿಕಾರವನ್ನು ಹೊಂದುವಂತೆ ಐಎಫ್‌ಐಗಳು ಒತ್ತಾಯಿಸುತ್ತಿವೆ.ಈ ನಿಯಂತ್ರಣ ಪ್ರಾಧಿಕಾರಗಳು ಪ್ರವಾಸೋದ್ಯಮ ಪ್ರದೇಶಗಳ ಅಭಿವೃದ್ಧಿ ಪ್ರಾಧಿಕಾರ/ಸಮಿತಿಯ ರೀತಿಯದ್ದೇ ಆಗಿದೆ ಮತ್ತು ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಎಲ್‌ಎಸ್‌ಜಿಐನಿಂದ ಈ ಆಡಳಿತ ಮಂಡಳಿಗೆ ಹಸ್ತಾಂತರಿಸುವಲ್ಲಿ ಇದು ಒಳಗೊಂಡಿದೆ.

ಪ್ರಸಕ್ತ, ಹೂಡಿಕೆಗೆ ಪ್ರಾಮುಖ್ಯತೆ ನೀಡುವಂತಹ ಆರ್ಥಿಕತೆಯನ್ನು ದೇಶವು ನಡೆಸಿಕೊಂಡು ಬರುತ್ತಿದ್ದು, ನೂತನ ಮೂಲಭೂತ ಸೌಕರ್ಯ ಮತ್ತು ಉದ್ಯಮ ಅಭಿವೃದ್ಧಿಯಲ್ಲಿ ಹೆಚ್ಚಿನ ಪ್ರಮಾಣದ ವಿದೇಶಿ ಮತ್ತು ಪ್ರಾದೇಶಿಕ ಬಂಡವಾಳವನ್ನು ನಿಯೋಜಿಸುವ ಮೂಲಕ ಮತ್ತು ಉದ್ಯಮಗಳಿಗೆ ಉತ್ತೇಜನ ನೀಡುವ ಮೂಲಕ ಕೇಂದ್ರ ಮತ್ತು ರಾಜ್ಯ ಸರಕಾರಗಳು ಆರ್ಥಿಕ ಅಭಿವೃದ್ಧಿಯ ಬೆನ್ನುಹತ್ತಿವೆ. ಹೂಡಿಕೆದಾರರ ಆಸಕ್ತಿಯನ್ನು ಸುಗಮಗೊಳಿಸಲು ನಿಷ್ಕರುಣೆಯ ಭೂ ಸ್ವಾಧೀನವು ಸಾಗಿದೆ. ಕೃಷಿ ಭೂಮಿಯಿಂದ ಹಿಡಿದು, ಅರಣ್ಯ ಪ್ರದೇಶ, ಆದಾಯ ತರುವಂತಹ ಭೂಮಿ ಮತ್ತು ಸಾಮಾನ್ಯ ನೈಸರ್ಗಿಕ ಸಂಪನ್ಮೂಲಗಳವರೆಗೆ ಎಲ್ಲಾ ರೀತಿಯ ಭೂಮಿಯನ್ನು ಗುರಿಯಾಗಿಸಿದೆ. ಪ್ರಜಾಪ್ರಭುತ್ವ ತತ್ವಗಳು ಮತ್ತು ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ಕಡೆಗಣಿಸಿ ಹೂಡಿಕೆಗೆ ಸಂಬಂಧಿಸಿದಂತೆ ಸರಕಾರವು ತನ್ನ ನೀತಿಯನ್ನು ಮುಂದುವರಿಸುವ ಕೆಲವು ಕ್ಷೇತ್ರಗಳಲ್ಲಿ ಪ್ರವಾಸೋದ್ಯಮವು ಒಂದು.

## ಪ್ರವಾಸೋದ್ಯಮದಲ್ಲಿನ ಯೋಜನೆ

ಕೇಂದ್ರ ಸರಕಾರ, ಅದರ ಸಂಸ್ಥೆಗಳು, ದೇಶದಲ್ಲಿನ ವಿವಿಧ ರಾಜ್ಯಗಳ ಸರಕಾರಗಳು ಪ್ರವಾಸೋದ್ಯಮದಲ್ಲಿನ ಯೋಜನೆಯ ಮೇಲೆ ವರ್ಷಗಳ ಕಾಲ ನಡೆಸಿದ ಅಧ್ಯಯನದ ಸಮೀಕರಣವು, ನೀತಿ ನಿರ್ಮಾಪಕರೊಂದಿಗಿನ ಪ್ರವಾಸೋದ್ಯಮ ಅಭಿವೃದ್ಧಿ ಚರ್ಚೆಗಳು ಕೇವಲ ಆರ್ಥಿಕ ಸಂಬಂಧಿ ಅಂಶವನ್ನಷ್ಟೇ ಅವಲಂಬಿಸಿದೆ ಎಂಬ ವಿಚಾರವನ್ನು ಹೊರಹಾಕಿವೆ.ಅವು ಯಾವುದೆಂದರೆ ಪ್ರವಾಸೋದ್ಯಮದಿಂದ ದೊರೆಯುವ ಆದಾಯ, ವಿದೇಶಿ ವಿನಿಮಯ ಆದಾಯ, ಉದ್ಯೋಗ ನಿರ್ಮಾಣ, ಇತರ ಆದಾಯ ಇತ್ಯಾದಿಗಳು. ಸಮುದಾಯಗಳು ಭಾಗವಹಿಸುವ ಯೋಜನೆಯು ಹೆಚ್ಚಿನ ಸಂದರ್ಭಗಳಲ್ಲಿ ಕೇವಲ ಬೂಟಾಟಿಕೆಯಾಗಿದೆ. ತಮ್ಮ ಸಮುದಾಯಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಾತ್ರವನ್ನು ನಿರ್ಧರಿಸುವ ಕುರಿತಂತೆ ನೈಜ ಸಮುದಾಯಗಳು ಭಾಗಿಯಾಗುವುದರ ಬದಲು,ಪ್ರವಾಸೋದ್ಯಮ ಯೋಜನೆಗಳಲ್ಲಿ ಸಮುದಾಯಗಳ ಭಾಗಿಯಾಗುವಿಕೆ ಮತ್ತು ಹಲವು ಸಾರ್ವಜನಿಕ ಸಂಬಂಧ ಕಾರ್ಯಗಳು ಸಮುದಾಯ ಪ್ರತಿಕ್ರಿಯೆಗಳ ಪ್ರತಿಕೂಲ ಪರಿಣಾಮವನ್ನು ತಪ್ಪಿಸುತ್ತದೆ ಎಂಬುದಾಗಿ ಸಮೀಕರಣದಲ್ಲಿ ಸೂಚಿಸಿದಂತೆ ಈ ಮೊದಲಿನ ಸಂಶೋಧನಾ ಪತ್ರಗಳಲ್ಲಿ ತಿಳಿಸಲಾಗಿತ್ತು.ಹೆಚ್ಚಿನ ಸಂದರ್ಭಗಳಲ್ಲಿ ಪ್ರವಾಸೋದ್ಯಮ ಪ್ರದೇಶದಲ್ಲಿನ ಮತ್ತು ಅದರ ಸುತ್ತಲಿನ ಪ್ರದೇಶದಲ್ಲಿನ ಸೂಕ್ಷ್ಮ ಹಂತದ ಪರಿಣಾಮಗಳನ್ನು ಗಮನಿಸುವುದೇ ಇಲ್ಲ. ಅಭಿವೃದ್ಧಿ, ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆ, ವಾತಾವರಣ, ಹವಾಮಾನ ವೈಪರೀತ್ಯ, ಜೀವನ ಮತ್ತು ಜೀವನಾಧಾರಕ್ಕಾಗಿ ಮಾನವ ಹಕ್ಕುಗಳ ಹೋರಾಟ ಮುಂತಾದವುಗಳಿಗೆ ಸಂಬಂಧಿಸಿದ ವಿಚಾರಗಳೊಂದಿಗೆ ಪ್ರವಾಸೋದ್ಯಮವು ಸಂಬಂಧವನ್ನು ಹೊಂದಿರುವ ವಿಷಯವಾಗಿದೆ ಎಂಬುದನ್ನು ಅಂಗೀಕರಿಸಲು ನೀತಿ ನಿರ್ಮಾಪಕರು ನಿರಾಕರಿಸಿದ್ದಾರೆ. ಪ್ರವಾಸೋದ್ಯಮದಲ್ಲಿನ ಯೋಜನೆಯು ಅಂತರ್‌ಸಂಪರ್ಕವನ್ನು ಪರಿಗಣನೆಗೆ ತೆಗೆದುಕೊಳ್ಳುವ ವಿಚಾರದ ಬಗ್ಗೆ ನೀತಿ ನಿರ್ಮಾಪಕರು ಮತ್ತು ಪ್ರವಾಸೋದ್ಯಮ

ಸಚಿವಾಲಯವು(ಎಒಟಿ) ಸಂಪೂರ್ಣವಾಗಿ ನಿರ್ಲ್ಯಕ್ಷ ತಾಳಿದಂತಿದೆ. ಮಾನವ ಹಕ್ಕುಗಳ ಮತ್ತು ಅಬಿಲಾಷೆಗಳಿಗಿಂತ ಮಿಗಿಲಾಗಿ ಬಂಡವಾಳ ಹೂಡಿಕೆಗೆ ಪ್ರಾಶಸ್ತ್ಯ ನೀಡುವುದು ಬಹುಷಃ ಕೇಂದ್ರ ಮತ್ತು ರಾಜ್ಯ ಯೋಜನಾ ಪ್ರಕ್ರಿಯೆಯ ಸಾಮಾನ್ಯ ಧೋರಣೆಯಾಗಿದೆ.

ಹೊರಹೊಮ್ಮುತ್ತಿರುವ ಮಾರುಕಟ್ಟೆಗಳು, ದೇಶದ ನಗರ ಕೇಂದ್ರಗಳಲ್ಲಿ ಆರ್ಥಿಕ ವೆಚ್ಚ, ರಾಜ್ಯ ಸರಕಾರದಿಂದ ಪ್ರವಾಸೋದ್ಯಮ ಕೊಡುಗೆ, ಮೂಲಸೌಕರ್ಯದಲ್ಲಿನ ಹೂಡಿಕೆಯಲ್ಲಿ ಹೆಚ್ಚಳ, ಮಾರುಕಟ್ಟೆ ಮತ್ತು ಜಾಹೀರಾತು, ಪ್ರಾದೇಶಿಕ ಮಾರುಕಟ್ಟೆಯ ಅಭಿವೃಧಿ, ವಾಯು ಸಾರಿಗೆಯ ಪ್ರಗತಿ, ಅಂತರ್ ಪ್ರಾದೇಶಿಕ ಸಹಕಾರ ಅಭಿವೃಧ್ಧಿ, ಮತ್ತು ಖಾಸಗಿ-ಸರಕಾರಿ ಪಾಲುದಾರಿಕೆಯ ಸಂಖ್ಯೆಯಲ್ಲಿ ಹೆಚ್ಚಳ ಇತ್ಯಾದಿಗಳು ದೇಶದಲ್ಲಿ ಪ್ರವಾಸೋದ್ಯಮ ಅಭಿವೃಧ್ಧಿಗೆ ಬೇಕಾಗುವ ಪ್ರಮುಖ ಅಂಶಗಳು. ಆದರೆ, ಮಹಾತ್ವಾಕಾಂಕ್ಷೆಯ ಅಭಿವೃಧ್ಧಿ ಯೋಜನೆಯತ್ತ ಉದ್ಯಮದ ಸ್ಥಾನವನ್ನು ತೀರ್ಮಾನಿಸುವ ಮೂಲಕ, ಪ್ರವಾಸೋದ್ಯಮ ಕ್ಷೇತ್ರದಲ್ಲಿ ಬಜೆಟ್ ಮತ್ತು ಸಬ್ಸಿಡಿ ಬೆಂಬಲ ಹೆಚ್ಚಳದ ಮೂಲಕ, ಪ್ರವಾಸೋದ್ಯಮ ಅಭಿವೃಧ್ಧಿ ಮತ್ತು ಸ್ಥಳೀಯ ಸಮುದಾಯಗಳಲ್ಲಿ ಸಾಮಾಜಿಕ-ಆರ್ಥಿಕ ಅಧಿಕಾರದ ನಡುವೆ ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲ.

- **ಇತ್ತೀಚಿನ ದೇಶದ 11ನೇ ಪಂಚವಾರ್ಷಿಕ ಯೋಜನೆಯಲ್ಲಿ " ಪ್ರವಾಸೋದ್ಯಮ ಅಭಿವೃಧ್ಧಿ"ಯ ಯೋಜನೆ**

ಈ ವರ್ಷದ ಆಗಸ್ಟ್ ತಿಂಗಳಲ್ಲಿ ಯೋಜನಾ ಆಯೋಗವು ಮೂರು ಸಂಪುಟಗಳ ದಾಖಲೆಗಳೊಂದಿಗೆ(ಇನ್ನು ಮುಂದೆ 11ನೇ ಪಂಚವಾರ್ಷಿಕ ಯೋಜನೆ ದಾಖಲೆ ಎಂದು ಉಲ್ಲೇಖಿಸಲಾಗುತ್ತದೆ) 11ನೇ ಪಂಚವಾರ್ಷಿಕ ಯೋಜನೆ(2007-12)ಯನ್ನು ಹೊರತಂದಿತು.ಕಳೆದ ಕೆಲವು ದಶಕಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಋಣಾತ್ಮಕ ಪ್ರಭಾವಗಳ ಅನೇಕ ದಾಖಲೆಗಳನ್ನು ಸಂಪೂರ್ಣವಾಗಿ ಕಡೆಗಣಿಸುವುದು ಈ 11ನೇ ಪಂಚವಾರ್ಷಿಕ ಯೋಜನೆ ದಾಖಲೆಯ ಒಂದು ಗಮನಾರ್ಹ ಅಂಶವಾಗಿದೆ. ಮಕ್ಕಳು ಮತ್ತು ಮಹಿಳೆಯರ ಶೋಷಣೆಗೂ ಪ್ರವಾಸೋದ್ಯಮವು ಕಾರಣವಾಗುತ್ತದೆ ಯೋಜನೆರಹಿತ ಮತ್ತು ನಿಯಂತ್ರಣರಹಿತ ಅಭಿವೃಧ್ಧಿ, ತಮ್ಮ ಜೀವನಾಧಾರವಾಗಿರುವ ನೈಸರ್ಗಿಸ ಸಂಪನ್ಮೂಲಗಳನ್ನು ಬಳಸದಂತೆ ಸ್ಥಳೀಯರನ್ನು ತಡೆಯುವುದು, ಪ್ರವಾಸೋದ್ಯಮ ಅಭಿವೃಧ್ಧಿ ಯೋಜನೆಯೊಂದಿಗೆ ವಿಕೇಂದ್ರೀಕೃತ ಯೋಜನಾ ಪ್ರಕ್ರಿಯೆಯನ್ನು ಬದಲಿಸುವುದು, ವಿದೇಶಿ ಪ್ರಾಬಲ್ಯ ಮುಂತಾದವುಗಳು ಅಂಗೀಕೃತಗೊಂಡಿಲ್ಲ ಅಥವಾ ಸೂಚಿಸಲ್ಪಟ್ಟಿಲ್ಲ.

ಭೂ ಬ್ಯಾಂಕ್ ಸ್ಥಾಪನೆಗೆ ಮತ್ತು ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಹೂಡಿಕೆಯನ್ನು ಸುಗಮಗೊಳಿಸಲು ಸರಳ ಹಂತ ಮತ್ತು ವ್ಯವಹಾರಕ್ಕೆ ರಾಜ್ಯ ಸರಕಾರಗಳು ಉತ್ತೇಜನ ನೀಡಬೇಕು ಎಂಬುದಾಗಿ ಏಳನೇ ಪಂಚವಾರ್ಷಿಕ ಯೋಜನಾ ದಾಖಲೆಗಳು ಸೂಚಿಸುತ್ತವೆ.ಭೂ ಬ್ಯಾಂಕ್‌ಗಳಿಗೆ ಸಂಬಂಧಿಸಿದಂತೆ, ಸರಕಾರಿ ನೀತಿಗಳಾದ ವಿಶೇಷ ಆರ್ಥಿಕ ವಲಯ ನಿರ್ಮಾಣ(ಎಸ್‌ಇಝೆಡ್), ಮಾಹಿತಿ ತಂತ್ರಜ್ಞಾನ ಪಾರ್ಕ್(ಐಟಿ ಪಾರ್ಕ್), ಮನರಂಜನಾ ವಲಯಗಳು ಮತ್ತು ಮೂಲಸೌಕರ್ಯಗಳಾದ ರಸ್ತೆ, ವಿಮಾನ ನಿಲ್ದಾಣ ಮತ್ತು ಬಂದರು ಮುಂತಾದವುಗಳಿಗೆ ಈಗಾಗಲೇ ಜನರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.ತಮ್ಮ ಜೀವನಾಧಾರಕ್ಕೆ ಅವಲಂಬಿತವಾಗಿರುವ ಸಮುದಾಯಗಳ ಭೂಮಿಯನ್ನು ಪಡೆದುಕೊಂಡು ರಾಜ್ಯ ಸರಕಾರವು ಗುತ್ತಿಗೆ ನೀಡುತ್ತಿರುವ ವಿಚಾರ ಮತ್ತು ಪ್ರವಾಸೋದ್ಯಮದಂತಹ ವಾಣಿಜ್ಯ ಅಭಿವೃಧ್ಧಿಗೆ ಪುಷ್ಠಿ ನೀಡುತ್ತಿರುವ ಬಗೆಗಿನ ಹೋರಾಟವು ದೇಶದಾದ್ಯಂತ ಈಗಾಗಲೇ ಬೆಳಕಿಗೆ ಬಂದಿದೆ. ದೇಶದಲ್ಲಿ ಸರಕಾರವು ಸ್ಥಳಾಂತರಗೊಂಡವರಿಗೆ ಪುನರ್ವಸತಿ ನೀಡಲು ಪ್ರಯತ್ನಿಸುತ್ತಿದ್ದು, ಆದರೆ, ನೂರಾರು, ಸಾವಿರಾರು ಜನರು ಸೂಕ್ತ ಪುನರ್ವಸತಿ ಸಿಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಯಾವುದೇ ಉದ್ಯಮಕ್ಕೆ ಭೂ ಬ್ಯಾಂಕ್ ನಿರ್ಮಾಣ ಮಾಡುವ ಯೋಜನೆಯು ಸಂಪೂರ್ಣವಾಗಿ ಆಕ್ಷೇಪಣೀಯವಾಗಿದೆ. ಪ್ರವಾಸೋದ್ಯಮದಲ್ಲಿನ ಹೂಡಿಕೆಯನ್ನು ವರ್ಧಿಸುವಲ್ಲಿ ಸರಕಾರವು ಮುಖ್ಯ ಹೊಣೆಯನ್ನು ಹೊಂದಿರುವುದರಿಂದ, ಮತ್ತು ಪ್ರವಾಸೋದ್ಯಮದಲ್ಲಿನ ವಾಣಿಜ್ಯ ಆಸಕ್ತಿ ಹಾಗೂ ಭೂ ಮಧ್ಯವರ್ತಿ/ಬ್ಯಾಂಕರ್ ನಂತಹ ಪ್ರಮುಖ ಪಾತ್ರವನ್ನು ನಿರ್ವಹಿಸುವುದರಿಂದ, ಜನರು, ಪರಿಸರ, ಸಂಸ್ಕೃತಿ ಮತ್ತು ಮುಖ್ಯವಾಗಿ ಭಾರತೀಯ ಸಂವಿಧಾನದಲ್ಲಿ ಉಲ್ಲೇಖಿತವಾಗಿರುವ "ಜೀವನ ಹಕ್ಕುಗಳು" ಇದರಂತೆ ಜನರ ಜೀವನಾಧಾರ ಹಕ್ಕುಗಳ ಬಗ್ಗೆ ಯಾವುದೇ ನಿರ್ಧಾರವನ್ನು ಕೈಗೊಳ್ಳುವುದಿಲ್ಲ.

'ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಹೂಡಿಕೆಯನ್ನು ಸುಗಮಗೊಳಿಸಲು ಸರಳ ಹಂತ ಮತ್ತು ವ್ಯವಹಾರ' ಎಂಬುದನ್ನು ಯೋಜನಾ ಆಯೋಗ ಏನೆಂದು ಅರ್ಥೈಸಿಕೊಂಡಿದೆ ಎಂಬುದು ಸ್ಪಷ್ಟವಾಗಿಲ್ಲ. ವಿವಿಧ ಸಮುದಾಯಗಳಿಂದ ವಿವಾದಾಸ್ಪದವಾಗಿ ಚರ್ಚೆಗೊಳಗಾಗಿರುವ "ಏಕ ಗವಾಕ್ಷಿಯ" ವಿಚಾರವನ್ನು ಪ್ರವಾಸೋದ್ಯಮ ಸಚಿವಾಲಯವು ಸಮರ್ಥಿಸಿ ಪೋಷಿಸುವ ಎಲ್ಲಾ ಸಾಧ್ಯತೆಗಳು ಇಲ್ಲ ಕಂಡುಬರುತ್ತಿವೆ.'ಏಕ ಗವಾಕ್ಷಿ' ಯಾಂತ್ರೀಕರಣದಡಿಯಲ್ಲಿ ಎಲ್‌ಎಸ್‌ಜಿಐಯ ಅನುಮತಿಯ ತತ್ವಗಳು ಮತ್ತು ಸ್ಥಳೀಯ ಸಮುದಾಯಗಳ ಸೂಚಿತ ಸಮ್ಮತಿಯ ಕುರಿತಾದ ನಿಯಮಗಳನ್ನು ಬಹುಪಾಲು ಉಲ್ಲಂಘನೆ ಮಾಡಲಾಗಿದೆ.ಹಿಮಾಚಲ ಪ್ರದೇಶದ ಪ್ರಸ್ತಾಪಿತ ಸ್ಕೈ ಗ್ರಾಮ ಕೇವಾಡಿಯ ಮತ್ತು ಆಂದ್ರಪ್ರದೇಶ ಕರಾವಳಿ ಪ್ರದೇಶ ಮುಂತಾದ ಗಮನಾರ್ಹ ವ್ಯಾಜ್ಯಗಳ ಸಮೀಕರಣ ಸಂಶೋಧನೆಯು, ಈ ಎಲ್ಲಾ ಪ್ರದೇಶಗಳಲ್ಲಿ ಸ್ಥಳೀಯ ಸಮುದಾಯಗಳ ಸಮ್ಮತಿಯನ್ನು ಸಂಪೂರ್ಣವಾಗಿ ಕಡೆಗಣಿಸಿರುವುದನ್ನು ಸೂಚಿಸುತ್ತದೆ.

ಇಐಎ ಅಧಿಸೂಚನೆಯ, 2006ರ ಪ್ರಕಾರ, ಹೂಡಿಕೆ ನಿಲುವು ಯೋಜನೆಗಳಿಗೆ ಅನುಗುಣವಾಗಿ ನೀತಿಯ ಬದಲಾವಣೆಯನ್ನು ವೃಧ್ಧಿಸುವುದರೊಂದಿಗೆ, ಪ್ರವಾಸೋದ್ಯಮ ಯೋಜನೆಗಳು ಪರಿಸರ ಪ್ರಭಾವ ವಿಮರ್ಷೆ(ಇಐಎ)ಯನ್ನು ನಡೆಸುವ ಅಗತ್ಯವಿಲ್ಲ. ಇದರೊಂದಿಗೆ, ಪ್ರವಾಸೋದ್ಯಮ ಉದ್ಯಮದ ದೀರ್ಘಾವಧಿಯ ಬೇಡಿಕೆಗಳನ್ನೂ ಪೂರೈಸಲಾಗಿತ್ತು. ಹೆಚ್ಚು ಪ್ರಮಾಣದ ಪ್ರದೇಶ ಮತ್ತು ಹೂಡಿಕೆಯನ್ನು ಹೊಂದಿರುವ ಪ್ರವಾಸೋದ್ಯಮ ಯೋಜನಗೆಳನ್ನು ದೇಶದಾದ್ಯಂತ ಪ್ರಾರಂಭಿಸಲಾಗುತ್ತಿದೆ.ಉದಾಹರಣೆಗೆ, ಮೂಲ ಒಡಂಬಡಿಕೆ ಪತ್ರ(ಎಂಒಯು)ದ ಪ್ರಕಾರ, ಎಚ್‌ಪಿಯಲ್ಲಿನ ಹಿಮಾಲಯನ್ ಸ್ಕೈ ವಿಲೇಜ್(ಎಚ್‌ಎಸ್‌ವಿ)ನ್ನು 133 ಎಕರೆ ಜಾಗದಲ್ಲಿ 300 ಮಿಲಿಯನ್ ಡಾಲರ್ ಬಂಡವಾಳದೊಂದಿಗೆ ನಿರ್ಮಿಸಲಾಗಿತ್ತು. ಆದರೆ, ಇದರ ಸ್ಕೈ ಚಟುವಟಿಕೆಗಳಿಗಾಗಿ ಇನ್ನೂ 6000 ಎಕರೆ ಬೆಟ್ಟ ಪ್ರದೇಶದ ಅಗತ್ಯವಿದೆ. ಮಹಾರಾಷ್ಟ್ರದಲ್ಲಿನ ಲಾವಸ ಪ್ರವಾಸೋದ್ಯಮ ಯೋಜನೆಯು 5058 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದ್ದು, ವರದಿಗಳ ಪ್ರಕಾರ, ಈ ಯೋಜನೆಯಲ್ಲಿ 8 ಬಿಲಿಯನ್ ಡಾಲರ್ ಬಂಡವಾಳ ಹೂಡಲು ಚಿಂತನೆ ನಡೆಸಿದೆ.ಒಟ್ಟಾರೆಯಾಗಿ ಪ್ರವಾಸೋದ್ಯಮದ ಹೆಸರಲ್ಲಿ ಎಲ್ಲವೂ ಪರಿಗಣನೆಗೆ ಬರುತ್ತಿದೆ.

ಇತ್ತೀಚೆಗೆ ಪ್ರವಾಸೋದ್ಯಮಕ್ಕಾಗಿ ನೇರ ಸಾಲ ಸೌಲಭ್ಯ ನೀಡುವ ಪ್ರವೃತ್ತಿಯು ಹೆಚ್ಚಾಗುತ್ತಿದೆ. ಕಳೆದ ದಶಕಗಳಲ್ಲಿ ಈ ಪ್ರವೃತ್ತಿಯು ಕಂಡುಬರುತ್ತಿರಲಿಲ್ಲ. ಇಐಎ ಅಡಿಯಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಹೊರಪಡಿಸುವುದರಿಂದ, ಐಎಫ್ಐ ಪ್ರವಾಸೋದ್ಯಮ ಸಾಲಗಳಿಗೆ ಉತ್ತೇಜನ ನೀಡುತ್ತಿದೆ.

- **ಪ್ರವಾಸೋದ್ಯಮ ಸಚಿವಾಲಯದ ಪ್ರಸ್ತಾಪ:**

ವಿಶೇಷ ಆರ್ಥಿಕ ವಲಯ ಕಾಯಿದೆ(ಎಸ್ಇಝೆಡ್)2005ರ ವಿರುದ್ಧ ದೇಶವ್ಯಾಪಿ ಪ್ರತಿಭಟನೆಯು ಸಾಗುತ್ತಿದ್ದರೂ, ನವೆಂಬರ್ 2006ರಲ್ಲಿ ಪ್ರವಾಸೋದ್ಯಮ ಕ್ಕೆ ಪ್ರೋತ್ಸಾಹ ನೀಡಲು, ಹೂಡಿಕೆ ಹೆಚ್ಚಿಸಲು, ಉದ್ಯೋಗ ನಿರ್ಮಾಣಕ್ಕಾಗಿ ಮತ್ತು ದೇಶದ ಮೂಲಭೂತ ಸೌಕರ್ಯ ವೃದ್ಧಿಯಾಗಲೂ ಎಸ್ಇಝೆಡ್ ಮಾದರಿಯಲ್ಲಿ ವಿಶೇಷ ಪ್ರವಾಸೋದ್ಯಮ ವಲಯ(ಎಸ್‌ಟಿಝೆಡ್)ವನ್ನು ನಿರ್ಮಾಣಗೊಳಿಸುವ ಪ್ರಸ್ತಾಪದ ಕುರಿತಂತೆ ರಾಷ್ಟ್ರೀಯ ಪ್ರವಾಸೋದ್ಯಮ ಸಲಹಾ ಸಮಿತಿ(ಎನ್‌ಟಿಎಸಿ),ಪ್ರವಾಸೋದ್ಯಮ ಸಚಿವಾಲಯದ ನೀತಿನಿರ್ಮಾಪಕರಿಗೆ ನೀತಿ ವಿಚಾರದ ಕುರಿತಂತೆ ಸಲಹೆ ನೀಡುವ ಉದ್ದೇಶವನ್ನು ಹೊಂದಿದ್ದರು.
ಎಂಬಟಿಗೆ ಎನ್‌ಟಿಎಸಿ ಮಾಡಿರುವ ಪ್ರಸ್ತಾಪದಲ್ಲಿ ಅಂಶಗಳು-

- ಎಸ್‌ಟಿಝೆಡ್‌ಗಳು ಪ್ರವಾಸೋದ್ಯಮ ಸ್ಥಳಗಳಲ್ಲಿ, ನಗರಗಳಲ್ಲಿ ಮತ್ತು ಕರಾವಳಿ ತೀರದಲ್ಲಿ ಸ್ಥಾಪಿತಗೊಳ್ಳಬೇಕು.
- ಈ ವಲಯಗಳ ಸ್ಥಾಪನೆಗೆ ಸರಕಾರವು ಏಕ ಗವಾಕ್ಷಿ ಅನುಮತಿಯನ್ನು ನೀಡಬೇಕು.
- 10 ವರ್ಷಗಳವರೆಗೆ ತೆರಿಗೆ ವಿನಾಯತಿ
- ಪ್ರತಿ ಎಸ್‌ಟಿಝೆಡ್‌ಗಳು 2,000ದಿಂದ 3,000 ಹೋಟೇಲ್ ಕೋಣೆಗಳನ್ನು ಒದಗಿಸಲು ಶಕ್ತಗೊಂಡಿರಬೇಕು,
- ಶಾಪಿಂಗ್ ಮತ್ತು ಮನರಂಜನಾ ಸೌಲಭ್ಯಗಳು
- ಬಂಡವಾಳ ಉತ್ಪನ್ನಗಳ ಮೇಲೆ ಆಮದು ವೆಚ್ಚ ರಿಯಾಯಿತಿ
- ದುಬಾರಿ ತೆರಿಗೆ, ಕೆಳ ಮೌಲ್ಯ ಹೆಚ್ಚುವರಿ ತೆರಿಗೆ ಮುಂತಾದವುಗಳ ಹಿಂಪಡೆತ
- ವಿದೇಶಿ ಪ್ರವಾಸಿಗರಿಗಾಗಿ ವಿಶೇಷ ಅನಿವಾಸಿ ಭಾರತೀಯ (ಎನ್ಆರ್ಐ) ಪ್ರವಾಸೋದ್ಯಮ ವಲಯ ಅಥವಾ ವಿಶಿಷ್ಟ ವಿಶ್ವ ಪ್ರವಾಸೋದ್ಯಮ ವಲಯ

ಮೂಲಸೌಕರ್ಯ ಅಭಿವೃದ್ಧಿ(ಅಂದರೆ, ಎಸ್ಇಝೆಡ್‌ನಲ್ಲಿರುವುದಕ್ಕಿಂತ ಹೆಚ್ಚಿನ ಅಭಿವೃದ್ಧಿ). ಆರ್ಥಿಕ ಚಟುವಟಿಕೆಯ ವರ್ಧನೆ(ಅಂದರೆ ಹೋಟೇಲ್, ವಿನೋದ ಪಾರ್ಕುಗಳು, ಮನರಂಜನಾ ಸೌಲಭ್ಯಗಳು, ಶಾಪಿಂಗ್ ಮಾಲ್) ಮತ್ತು ಈ ಪ್ರದೇಶದ ಸಮುದಾಯಗಳಿಗೆ ಉದ್ಯೋಗ ನಿರ್ಮಾಣ ಇವುಗಳಿಗೆ ಕಾರಣವಾಗುವ ಎಸ್‌ಟಿಝೆಡ್‌ನಲ್ಲಿ ಖಾಸಗಿ ಹೂಡಿಕೆಯನ್ನು ಹೆಚ್ಚುಗೊಳಿಸುವ ಗುರಿಯನ್ನು ಈ ಎಲ್ಲಾ ಸಲಹೆಗಳು ಹೊಂದಿವೆ.

ಭಾರತದ ಗ್ರಾಮೀಣ ಅಭಿವೃದ್ಧಿ ಸಂಭಾವ್ಯತೆಯನ್ನು ಹೊರಹಾಕುವಂತಹ ಭಾರತ್ ನಿರ್ಮಾಣ್ ಪ್ಲಸ್ ಎಂಬ ಸಿಐಐಗಾಗಿ ಮಿಕ್ಸಿ &ಕಂಪನಿ ಸಿದ್ಧಪಡಿಸಿರುವ ವರದಿಯೊಂದನ್ನು ಭಾರತೀಯ ಉದ್ಯಮ ಒಕ್ಕೂಟವು(ಸಿಐಐ) ಜೂನ್ 2007ರಂದು ಪ್ರಧಾನಮಂತ್ರಿಗಳಿಗೆ ಸಲ್ಲಿಸಿತ್ತು.ಗ್ರಾಮೀಣ ಭಾರತ ಸಂಭಾವ್ಯತೆಗಳನ್ನು ಹೊರಹಾಕುವ ಕುರಿತಂತೆ ಕ್ರಮಗಳ ಸರಣಿ ಮತ್ತು ಹಂತಗಳ ವಿವರಣೆಯನ್ನು ಈ ವರದಿ ಹೊಂದಿತ್ತು. ವಿಶೇಷ ಪ್ರವಾಸೋದ್ಯಮ ವಲಯವೆಂದು ಪ್ರದೇಶಗಳನ್ನು ಗುರುತಿಸುವ ರಾಷ್ಟ್ರೀಯ ವಿಶೇಷ ಪ್ರವಾಸೋದ್ಯಮ ವಲಯ ಪ್ರಾಧಿಕಾರವನ್ನು ಕೇಂದ್ರ ಸರಕಾರವು ಸ್ಥಾಪಿಸಬೇಕು ಅದರ ಸುಧಾರಣೆ ಮತ್ತು ನಿರ್ಮಾಣವು ಸುಗಮಗೊಳ್ಳುವಂತಹ ಕಾಯಿದೆಯೊಂದನ್ನು ರಚಿಸುವ ಕುರಿತಂತೆ ಇದರಲ್ಲಿ ಪ್ರಸ್ತಾಪಿಸಲಾಗಿತ್ತು,ವಿದ್ಯುತ್, ನೀರು, ಕೃಷಿ, ಅನುಪಯುಕ್ತ ಭೂಮಿ ಮತ್ತು ಪ್ರವಾಸೋದ್ಯಮ ಇವುಗಳ ಕುರಿತಾದ ನೀತಿಯ ಸುಧಾರಣೆಯನ್ನು ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಮಾಡುವಂತೆ ಸಲಹೆ ನೀಡಿತ್ತು ಮತ್ತು ಕೇಂದ್ರ ಮತ್ತು ರಾಜ್ಯದಿಂದ ನಿರ್ಮಿಸಲ್ಪಡುವ ಅವಕಾಶಗಳನ್ನು ಬಳಸಿಕೊಳ್ಳುವಂತೆ ಪಂಚಾಯತ್ ಮತ್ತು ಸ್ಥಳೀಯ ಸಮುದಾಯಗಳಿಗೆ ಒತ್ತಾಯಿಸಿತ್ತು.ನೀತಿ ಕಾರ್ಯತತ್ಪರತೆಯಲ್ಲಿ ಹೂಡಿಕೆ ವಾಣಿಜ್ಯ ಸಚಿವಾಲಯವು ಎಸ್ಇಝೆಡ್2ಗಳಿಗೆ ನೀಡುವ ತ್ವರಿತ ಅನುಮೋದನೆಯೊಂದಿಗೆ, ಕಳೆದ ಕೆಲವು ವರ್ಷಗಳಲ್ಲಿ, ನಿರ್ದಿಷ್ಟ ಎಸ್‌ಟಿಝೆಡ್ ಅಥವಾ ಎಸ್ಇಝೆಡ್‌ಗಳಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ನಿರ್ಮಾಣದ ಯೋಜನೆಯನ್ನು ಅನೇಕ ರಾಜ್ಯಗಳ ಸರಕಾರಗಳು ಹೊಂದಿರುವುದನ್ನು ನಾವು ಕಾಣಬಹುದು.
ವ್ಯಾಪಕ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ನಿರ್ದಿಷ್ಟ, ವಿಶಿಷ್ಟ ಪ್ರದೇಶಗಳನ್ನು/ವಲಯಗಳನ್ನು ಗುರುತಿಸುವ ಪರಿಪಾಠವು ಭಾರತದಲ್ಲಿ ಹೊಸದೇನಲ್ಲ. ಇದು ಮೊದಲ ಬಾರಿಗೆ ವಿಶೇಷ ಪ್ರವಾಸೋದ್ಯಮ ಪ್ರದೇಶ(ಎಸ್‌ಟಿಎ)ಗಳ ಮೂಲಕ 1992ರ ರಾಷ್ಟ್ರೀಯ ಪ್ರವಾಸೋದ್ಯಮ ನೀತಿಯಲ್ಲಿ ಪರಿಚಯಿಸಲ್ಪಟ್ಟಿತು. ಎಸ್‌ಟಿಎ ನೀತಿಯನ್ನು 1992ರಲ್ಲಿ ಪ್ರಸ್ತಾಪಿಸಿದಾಗ, ಬೇಕಲ್(ಕೇರಳ), ಸಿಂದುದರ್ಗ್(ಮಹಾರಾಷ್ಟ್ರ), ದಿಯು, ಕಾಂಚೀಪುರಂ, ಮಹಾಬಲಿಪುರಂ(ಎರಡೂ ತಮಿಳುನಾಡು) ಇವುಗಳು ಪ್ರಸ್ತಾಪಿತ ಸ್ಥಳಗಳಾಗಿದ್ದವು.ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಸಾಕಷ್ಟು ಆರ್ಥಿಕ ಉತ್ತೇಜನ ಸಿಗದ ಕಾರಣ ಈ ಪ್ರಸ್ತಾಪವನ್ನು ಕೈಗೆತ್ತಿಕೊಂಡಿರಲಿಲ್ಲ. ಆದರೆ, ಬೇಕಲ್ ಮತ್ತು ಸಿಂದುದರ್ಗ್ ಪ್ರದೇಶದಲ್ಲಿ ನೀತಿಯನ್ನು ಕಾರ್ಯಗತಗೊಳಿಸಲು ಸರಕಾರವು ಸಿದ್ಧವಾಗಿದ್ದರೂ, ಸ್ಥಳೀಯ ಸಮುದಾಯಗಳು ಅದನ್ನು ತೀವ್ರವಾಗಿ ವಿರೋಧಿಸಿದ್ದವು.

- **ವಿವಿಧ ರಾಜ್ಯಗಳಲ್ಲಿ ಪ್ರವಾಸೋದ್ಯಮ ಯೋಜನೆಯ ಮಿಣುಕುನೋಟ**

ಶ್ರೀಕಾಕುಲಂನಿಂದ ನೆಲ್ಲೂರು ಜಿಲ್ಲೆಯವರೆಗೆ ಆಂಧ್ರಪ್ರದೇಶದ 972 ಕಿ.ಮೀ ಕರಾವಳಿ ಪ್ರದೇಶವನ್ನು ಕರಾವಳಿ ಉದ್ಯಮ ಕಾರಿಡಾರ್ ಆಗಿ ಅಭಿವೃದ್ಧಿಪಡಿಸುವ ಗುರಿಯೊಂದಿಗೆ, ಆಂಧ್ರಪ್ರದೇಶ ರಾಜ್ಯ ಸರಕಾರವು ಸರಕಾರಿ ಆದೇಶ(ಜಿಒ)43ನ್ನು ಹೊರತಂದಿತ್ತು.ಉದ್ಯಮ ಪಾರ್ಕುಗಳು, ನಿರೂಪಣಾ ಪಾರ್ಕುಗಳು, ದೊಡ್ಡ

ಕೆಮಿಕಲ್ ಕಾಂಪ್ಲೆಕ್ಸ್‌ಗಳು, ವಿನೋದ ಪಾರ್ಕುಗಳು, ಔಷಧ ಪಾರ್ಕುಗಳು, ಪ್ರವಾಸೋದ್ಯಮ ಯೋಜನೆ ಮುಂತಾದವುಗಳ ನಿರ್ಮಾಣದ ಮೂಲಕ ರಾಜ್ಯದಲ್ಲಿ ಅಭಿವೃದ್ಧಿ ಬೆಳವಣಿಗೆಗೆ ಈ ಯೋಜನೆಯು ಪುಷ್ಠಿ ನೀಡುತ್ತದೆ ಎಂಬ ಕಾರಣಕ್ಕಾಗಿ, ಆಂಧ್ರಪ್ರದೇಶ ರಾಜ್ಯ ಸರಕಾರವು ಇದನ್ನು ಪ್ರತಿಷ್ಠಿತ ಯೋಜನೆ ಎಂಬುದಾಗಿ ಸೂಚಿಸಿತು.ಸಾಕಷ್ಟು ಪ್ರಮಾಣದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತು ಮತ್ತು ಹೂಡಿಕೆ ಪ್ರದೇಶದಲ್ಲಿ ಪ್ರವಾಸೋದ್ಯಮ ಸೇರಿದಂತೆ ಉದ್ಯಮಗಳೊಂದಿಗೆ ವಿವಿಧ ಒಪ್ಪಂದಗಳನ್ನು ಸರಕಾರವು ತೊಡಗಲು ಪ್ರಾರಂಭಿಸಿತು. ಸ್ಥಳೀಯ ಸಮುದಾಯಗಳು ಇದನ್ನು ವಿರೋಧಿಸಿದವು ಮತ್ತು ಜಿಒ ವಿರುದ್ಧ ಬೃಹತ್ ಪ್ರಮಾಣದ ಚಳವಳಿ ಪ್ರಾರಂಭಗೊಂಡಿತು. ಇಂತಹ ಅಭಿವೃದ್ಧಿಯು ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಮೇಲೆ ಪ್ರಭಾವ ಬೀರುತ್ತದೆ ಮತ್ತು ಇದರಿಂದ ಆಹಾರ ಸುರಕ್ಷತೆಯ ಮೇಲೆ ಹಾನಿಯುಂಟಾಗುತ್ತದೆ ಎಂಬುದು ಅವರ ಆತಂಕವಾಗಿತ್ತು. ಸಾರ್ವಜನಿಕರ ಒತ್ತಾಯದ ಮೇರೆಗೆ, 2008 ನವೆಂಬರ್ 8ರಂದು ಈ ಜಿಒವನ್ನು ರದ್ದುಪಡಿಸಿರುವುದಾಗಿ ಸರಕಾರವು ಘೋಷಿಸಿತು. ಆದರೆ, ಸರಕಾರವು ವಿವಿಧ ಉದ್ಯಮಗಳೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಸ್ಥಿತಿಯ ಕುರಿತಂತೆ ಪ್ರಶ್ನೆಗಳು ಹಾಗೇ ಉಳಿದುಕೊಂಡಿವೆ.

ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುವಂತಹ ಗಿರಿಧಾಮದಂತಹ ಪ್ರದೇಶಗಳಲ್ಲಿ ಪ್ರವಾಸೋದ್ಯಮ ರಜಾದಿನಗಳ ರೆಸಾರ್ಟ್‌ಗಳು, ವಸತಿ ಸಮುಚ್ಛಯಗಳ ಅಭಿವೃದ್ಧಿಗೆ ವಿಶೇಷ ಶಾಸನವೊಂದನ್ನು ಮಹಾರಾಷ್ಟ್ರ ಸರಕಾರವು ಅಂಗೀಕರಿಸಿತು.ಗಿರಿಧಾಮಗಳನ್ನು ಪ್ರಾರಂಭಿಸುವ ಉದ್ದೇಶದಿಂದ ಇದಕ್ಕೆಸೂಕ್ತವಾದ ಮತ್ತು ಯೋಗ್ಯವಾದ ಸ್ಥಳಗಳನ್ನು ಘೋಷಿಸುವ ಅಧಿಕಾರವನ್ನು ನಗರ ಅಭಿವೃದ್ಧಿ ವಿಭಾಗವು ಪಡೆದುಕೊಂಡಿತು. ಈ ಅಧಿಸೂಚನೆಯು ಲಾವಸ ಯೋಜನೆ ಮತ್ತು ದೇಶದ ಪರಿಸರ ಕಾನೂನನನ್ನು ಸಂಪೂರ್ಣವಾಗಿ ಕಡೆಗಣಿಸಿ ಅಭಿವೃದ್ಧಿಪಡಿಸಲಾದ ಅಂಬೆ ಕಣಿವೆಯಂತಹ ವಿವಾದಾತ್ಮಕ ಯೋಜನೆಗಳಿಗೆ ಹಾದಿ ಮಾಡಿಕೊಟ್ಟಿತು.

ನರ್ಮದಾ ಕಾಲುವೆಯನ್ನು ಸಂಪರ್ಕಿಸುವ ವಿವಿಧ ಸ್ಥಳಗಳು ಸೇರಿದಂತೆ ನರ್ಮದಾ ನದಿಯ ದಂಡೆಯಲ್ಲಿ ವಿವಿಧ ರಾಷ್ಟ್ರಗಳ ಮಾದರಿಯನ್ನು ಮತ್ತು ರಚನೆಯನ್ನು ನಿರ್ಮಿಸುವ ಮೂಲಕ ವಿಶ್ವಗ್ರಾಮ(ಗ್ಲೋಬಲ್ ವಿಲೇಜ್)ಪ್ರಾರಂಭಿಸುವ ಪ್ರಸ್ತಾಪವನ್ನು ಗುಜರಾತ್ ಪ್ರವಾಸೋದ್ಯಮ ನೀತಿ 2003-2010 ಹೊಂದಿದೆ. ವಿವಿಧ ರಾಷ್ಟ್ರಗಳಿಂದ ಬರುವ ಎನ್‌ಆರ್‌ಐಗಳು ಮತ್ತು ವಿದೇಶಿ ಪ್ರವಾಸಿಗರು ಇಲ್ಲಿ ತಂಗಬಹುದು ಎಂಬುದಾಗಿ ಇದು ಸೂಚಿಸುತ್ತದೆ. ಸಮುದಾಯಗಳ ವಸತಿ ತಾಣವಾಗಿದ್ದ ಭೂಮಿಯನ್ನು ಶ್ರೀಮಂತ ಮತ್ತು ಗಣ್ಯ ಶ್ರೀಮಂತರಿಗೆ 'ಮನೆ ಭಾವನೆ' ನೀಡುವಂತಹ ಪ್ರವಾಸೋದ್ಯಮ ಸೌಕರ್ಯ ಮತ್ತು ಸಂತೋಷವನ್ನು ನೀಡುವಂತಹ ಪ್ರಸ್ತಾಪವು ನಿಜವಾಗಿಯೂ ದುರದೃಷ್ಟಕರ.

ನೀರು, ಅರಣ್ಯ, ಭೂಮಿ ಸೇರಿದಂತೆ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಜನರಿಗೆ ನಿಯಂತ್ರಣ ಸಿಗುವ ಭರವಸೆಯೊಂದಿಗೆ , ತಮ್ಮದೇ ರಾಜ್ಯ ಸ್ಥಾಪಿಸುವ ಆದಿವಾಸಿಗಳ ಹೋರಾಟದ ಫಲವಾಗಿ ಜಾರ್ಖಂಡ್ ರೂಪುಗೊಂಡಿತು. ಕಳೆದ ವರ್ಷ ರಾಜ್ಯ ಸರಕಾರವು ಗಣಿಗಾರಿಕೆ ಪ್ರವಾಸೋದ್ಯಮ ಎಂಬು ಹೊಸ ನಿರ್ಮಾಣವೊಂದನ್ನು ಘೋಷಿಸಿದ್ದು, ಇದು ಭಾರತದ ಪ್ರಪ್ರಥಮ ಯೋಜನೆ ಎಂಬುದಾಗಿ ಸೂಚಿಸಿತ್ತು.ಗಣಗಾರಿಕೆಯ ಮೂಲಕ ನೈಸರ್ಗಿಕ ಸಂಪನ್ಮೂಲಗಳ ಮಿತಮೀರಿದ ದುರ್ಬಳಕೆಯ ಪರಿಣಾಮವಾಗಿ ಆದಿವಾಸಿಗಳು ಎದುರಿಸುತ್ತಿರುವ ಸಾಮಾಜಿಕ ಮತ್ತು ಪರಿಸರ ಪ್ರಭಾವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ, ತಮ್ಮ ರಾಜ್ಯದ ಸ್ವಾಯತ್ತತೆಗಾಗಿ ಆದಿವಾಸಿಗಳ ನಡೆಸುತ್ತಿರುವ ಹೋರಾಟವು ಹೋರಾಟವಾಗಿಯೇ ಉಳಿದಿದೆ.

ಫೆಬ್ರವರಿ 2005ರಲ್ಲಿ ಕೇರಳ ರಾಜ್ಯ ಸರಕಾರವು ಕೇರಳ ಪ್ರವಾಸೋದ್ಯಮ( ಪ್ರದೇಶಗಳ ಪೋಷಣೆ ಮತ್ತು ಸಂರಕ್ಷಣೆ)ಕಾಯಿದೆ,2005(ಇನ್ನು ಮುಂದೆ ಕಾಯಿದೆ ಎಂದು ಉಲ್ಲೇಖಿಸಲಾಗುತ್ತದೆ)ಯನ್ನು ಅಂಗೀಕರಿಸಿತು."ಈ ಕಾಯಿದೆಯನ್ನು ರಾಜ್ಯದಲ್ಲಿ ಪ್ರವಾಸೋದ್ಯಮ ಪ್ರದೇಶಗಳ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಪೋಷಣೆ ಮತ್ತು ಸಂರಕ್ಷಣೆಗಾಗಿ " ಎಂಬ ಪ್ರಸ್ತಾವನೆಯನ್ನು ಇದು ಹೊಂದಿತ್ತು. ಭಾರತೀಯ ಸಂವಿಧಾನದ 73 ಮತ್ತು 73ನೇ ಸಂವಿಧಾನ ವಿಧಿಯ ತಿದ್ದುಪಡಿಯನ್ನು ಹಿಂಪಡೆಯುವ ಮೂಲಕ ಸ್ಥಳೀಯ ಆಡಳಿತ ಸಂಸ್ಥೆಗಳು ಆದೇಶ ನೀಡುವುದರೊಂದಿಗೆ, ಈ ಕಾಯಿದೆಯು ಕೆಲವು ಪ್ರದೇಶಗಳನ್ನು ವಿಶೇಷ ಪ್ರವಾಸೋದ್ಯಮ ವಲಯ ಎಂಬುದಾಗಿ ಘೋಷಿಸಿತು. ಕೇರಳ ಪಂಚಾಯತ್ ರಾಜ್ ಕಾಯಿದೆ 1994ರ ಸಂವಿಧಾನ ಆದೇಶದ ಮತ್ತು ನಿಬಂಧನೆಗಳನ್ನು ಈ ಕಾಯಿದೆಯು ಸಂಪೂರ್ಣವಾಗಿ ಕಡೆಗಣಿಸಿ, ವಿಶೇಷ ಪ್ರವಾಸೋದ್ಯಮ ಪ್ರದೇಶ(ವಲಯ ರೀತಿಯದ್ದೇ ಆದರೆ ಶಾಸನದಲ್ಲಿ ಪ್ರದೇಶ ಎಂದು ಉಲ್ಲೇಖಿಸಲಾಗಿದೆ)ವನ್ನು ಘೋಷಿಸಿತು. ವಿಶೇಷ ಬೃಹತ್ ಪ್ರವಾಸೋದ್ಯಮ ಯೋಜನೆಯ ಮೂಲಕ ಪ್ರವಾಸೋದ್ಯಮ ಕೇಂದ್ರ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಮತ್ತು ಅದಕ್ಕೆ ಪ್ರಾಮುಖ್ಯತೆ ನೀಡುವ ಪ್ರವಾಸೋದ್ಯಮ ಸಂಬಂಧಿ ಪ್ರಕ್ರಿಯೆಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ, ಸಾಮಾನ್ಯ ಯೋಜನಾ ಪ್ರಕ್ರಿಯೆಯನ್ನು ಬದಲಿಸುವ(ಸ್ಥಳೀಯ ನಗರ ಅಥವಾ ರಾಷ್ಟ್ರ ಯೋಜನಾ ಕಾಯಿದೆಯಡಿಯಲ್ಲಿ ರೂಪಿತವಾದ ಯಾವುದೇ ಪ್ರದೇಶದ ಸಾಮಾನ್ಯ ಬೃಹದ್ಯೋಜನೆ)ಕುರಿತು ಈ ಕಾಯಿದೆಯು ಚಿಂತನೆ ನಡೆಸುತ್ತದೆ. ಪ್ರವಾಸೋದ್ಯಮವನ್ನು ಉತ್ತುಂಗಕ್ಕೇರಿಸಲು ಸಾದ್ಯವಾಗುವ ಮೂಲಕ ಸ್ಥಳೀಯ ವಾತಾವರಣ, ಸಂಸ್ಕೃತಿ, ಮತ್ತು ಆರ್ಥಿಕ ವಾಸ್ತವತೆಗಳಿಂದ ಪ್ರವಾಸಿಗರನ್ನು ದೂರವಿರಿಸುವ ಮತ್ತು ಸ್ಥಳೀಯ ಸಮುದಾಯಗಳಿಗೆ ಉಂಟಾಗಬಲ್ಲ ಪ್ರಯೋಜನಗಳಿಂದ ದೂರವೇ ಇರುವಂತಹ ರೀತಿಯಲ್ಲಿ ಪ್ರವಾಸಿ ಸ್ಥಳಗಳನ್ನು 'ವಿಶೇಷ ದ್ವೀಪ'ಗಳ ಮಾದರಿಯನ್ನು ಇದು ವಿಸ್ತರಿಸುತ್ತದೆ.

ಮದ್ಯಪ್ರದೇಶ, ಜಾರ್ಖಂಡ್ ಮತ್ತು ಚತ್ತೀಸ್‌ಗಡ ರಾಜ್ಯಗಳಲ್ಲಿ ಅನೇಕ ಸಂರಕ್ಷಿತ ಪ್ರದೇಶಗಳನ್ನು ವನ್ಯಮೃಗ ಪ್ರವಾಸೋದ್ಯಮ, ಪರಿಸರ ಪ್ರವಾಸೋದ್ಯಮ, ಸಾಹಸ ಪ್ರವಾಸೋದ್ಯಮ ಮುಂತಾದ ವಿವಿಧ ಪ್ರವಾಸೋದ್ಯಮ ಚಟುವಟಿಕೆಗಳಿಗಾಗಿ ತೆರವುಗೊಳಿಸಲಾಗಿದ್ದು, ಬುಡಗಟ್ಟು ಜನಾಂಗ ಅಥವಾ ಇತರ ಸಾಂಪ್ರದಾಯಿಕ ಅರಣ್ಯವಾಸಿಗಳ(ಅರಣ್ಯ ಹಕ್ಕುಗಳಿಂದ ಗುರುತಿಸಲ್ಪಟ್ಟ) ಕಾಯಿದೆ,2006(ಇನ್ನು ಮುಂದೆ ಅರಣ್ಯ ಹಕ್ಕು ಕಾಯಿದೆ ಎಂದು ಉಲ್ಲೇಖಿಸಲಾಗುತ್ತದೆ)ಯನ್ನು ಜಾರಿಗೊಳಿಸುವ ಬಗ್ಗೆ ಸರಕಾರವು ಕಡಿಮೆ ಆಸಕ್ತಿಯನ್ನು ತೋರಿಸುತ್ತಿದೆ.ಈ ಕಾಯಿದೆಯು ಅರಣ್ಯವಾಸಿಗಳಿಗೆ, ಆದಿವಾಸಿ ಜನಾಂಗಕ್ಕೆ ಅರಣ್ಯ ಪ್ರದೇಶ ಮತ್ತು ಇತರ

ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವ ಹಕ್ಕನ್ನು ನೀಡುತ್ತದೆ.ಭಾರತದಲ್ಲಿನ ವಸಾಹತು ಅರಣ್ಯ ನೀತಿಯ ಮುಂದುವರಿಕೆಯ ಫಲವಾಗಿ, ಕೆಲವು ದಶಕಗಳ ಕಾಲ ಈ ಹಕ್ಕುಗಳನ್ನು ನಿರಾಕರಿಸಲಾಗಿತ್ತು. ಈ ಶಾಸನವು "ಜೀವನಾಧಾರವನ್ನು ಉಳಿಸುವುದರೊಂದಿಗೆ , ಮಿಲಿಯನ್ ಆದಿವಾಸಿಗಳ ಮತ್ತು ಇತರ ಅರಣ್ಯವಾಸಿಗಳ ಘನತೆಯನ್ನು ಪುನರ್ ಸ್ಥಾಪಿಸುವುದರೊಂದಿಗೆ, ನಮ್ಮ ದೇಶದ ಅರಣ್ಯ ಸಂಪತ್ತನ್ನು ರಕ್ಷಿಸುವ ಹೊಣೆಯನ್ನು ಅರಣ್ಯದ 'ಸಮರ್ಥ ನಾಗರಿಕರು' ಭರಿಸಲು ಸಾಧ್ಯವಾಗುವಂತೆ ಅರಣ್ಯದಲ್ಲಿ ನೂತನ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವುದರೊಂದಿಗೆ, ಸಂರಕ್ಷಣೆಯನ್ನು ಏಕೀಕರಣಗೊಳಿಸುತ್ತದೆ" ಎಂಬುದಾಗಿ ಅರಣ್ಯ ಹಕ್ಕು ಕಾಯಿದೆಯ ಹೋರಾಟಗಾರ ಪ್ರದೀಪ್ ಪ್ರಭು ಅಭಿಪ್ರಾಯಪಡುತ್ತಾರೆ.

## ನಂಬಲಸದಳ ಭಾರತ!

ಇಂದಿನ ದಿನಗಳಲ್ಲಿ ಸರಕಾರವು ಪ್ರೋತ್ಸಾಹ ನೀಡುತ್ತಿರುವ ಪ್ರವಾಸೋದ್ಯಮ ಅಭಿವೃದ್ಧಿಯು ವಂಚನೆಯ ಲಕ್ಷಣಗಳನ್ನು ಹೊಂದಿದೆ. ಈ ಪ್ರಕ್ರಿಯೆಯ ಉತ್ತೇಜಕ ಸೂತ್ರಗಳು ಮತ್ತು ಅಭಿವೃದ್ಧಿ ಭರವಸೆಗಳು ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಸಂಸ್ಕೃತಿ ಪರಂಪರೆಯನ್ನು ಹಾಳುಮಾಡುವುದರೊಂದಿಗೆ, ಸಮುದಾಯಗಳ ಲಕ್ಷಣ, ಧರ್ಮ, ಸಾರ್ವಭೌಮತೆಯನ್ನು ಹಾಗೂ ಭಾರತೀಯ ಸಂವಿಧಾನದಲ್ಲಿ ಸ್ಥಾಪಿತಗೊಂಡಿರುವ ಪ್ರಜಾಪ್ರಭುತ್ವ ತತ್ವಗಳನ್ನು ನಿರ್ನಾಮ ಮಾಡುತ್ತದೆ .

ತಮ್ಮ ಭೂಮಿ, ಜೀವನಾಧಾರ, ನೀರು ಸಂಪನ್ಮೂಲ, ಮತ್ತು ಸ್ಥಳೀಯ ಸಂಸ್ಕೃತಿ ಆಧಾರದ ಜೀವನಶೈಲಿಯ ರಕ್ಷಣೆಗಾಗಿ ದೇಶದಾದ್ಯಂತ ಮಹಿಳೆಯರು, ರೈತರು, ಕಾರ್ಮಿಕರು ವ್ಯಾಪಕ ಹೋರಾಟದಲ್ಲಿ ನಿರತರಾಗಿದ್ದಾರೆ. ಉದ್ಯೋಗ ನಿರ್ಮಾಣ ಮಾಡಬಲ್ಲ ಗ್ರಾಮೀಣ ಉದ್ಯಮಗಳು, ಸ್ವಾವಲಂಬನೆ ಕೃಷಿ, ವಿಕೇಂದ್ರೀಕೃತ ಪ್ರಜಾಪ್ರಭುತ್ವ ಅಭಿವೃದ್ಧಿ ಯೋಜನಾ ಪರ್ಯಾಯಗಳು ಮುಂತಾದವುಗಳ ಅಭಿವೃದ್ಧಿಗಾಗಿ ನಡೆಸುತ್ತಿರುವ ಹೋರಾಟವು ದೇಶದಾದ್ಯಂತ ಹರಡಿದೆ. ಸರಕಾರವು ಪ್ರಜಾಪ್ರಭುತ್ವ ಸಮಾಜವಾದ, ನಿರ್ಧಾರ ಕೈಗೊಳ್ಳುವಲ್ಲಿ ಜನರು ಭಾಗಿಯಾಗುವಿಕೆಯು ನಮ್ಮ ಸಂವಿಧಾನದ ಮೂಲಭೂತ ಬದ್ಧತೆಯಾಗಿದೆ. ಪರಿಸರ ಮತ್ತು ಪ್ರಜಾಪ್ರಭುತ್ವ ನಿರ್ವಹಣೆ ಹಾಗೂ ಮಾನವ ಸಂಬಂಧಗಳನ್ನು ರಕ್ಷಿಸುವುದರಿಂದ ಮಾತ್ರವೇ ನಾವು ಪಾರಾಗಲು ಸಾಧ್ಯ ಎಂಬುದಾಗಿ ಜನರು ತಿಳಿದುಕೊಂಡಿರುವ ಕಾರಣ, ಜನರು ತಾವೇ ಸಂಘಟಿಸಲ್ಪಟ್ಟು ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹೆಚ್ಚಿನ ರಾಜಕೀಯ ನಾಯಕರು, ಸಾಮ್ರಾಜ್ಯಶಾಹಿ, ಆದರೆ, ನವೀನ ಸಿದ್ಧಾಂತ ಮತ್ತು ಗ್ರಾಹಕ ತತ್ವಗಳೊಂದಿಗೆ ಒಪ್ಪಂದ ಮಾಡಿಕೊಂಡಿರುವುದರಿಂದ ಪ್ರಸಕ್ತ ರಾಜಕೀಯ ಪಕ್ಷಗಳು ಇವುಗಳನ್ನು ಅಂಗೀಕರಿಸುವ ಆಸಕ್ತಿ ತೋರಿಸುತ್ತಿಲ್ಲ.

ಮುಖ್ಯವಾಗಿ, ಅಭಿವೃದ್ಧಿಯ ಹೆಸರಲ್ಲಿ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ದೌರ್ಜವ್ಯವನ್ನು ಸರಕಾರವು (ಕೇಂದ್ರ ಮತ್ತು ರಾಜ್ಯ ಎರಡೂ) ತಡೆಯಬೇಕು. ಈ ಅಭಿವೃದ್ಧಿ ಮಾದರಿಗಳು, ಜನರಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಹಕ್ಕನ್ನು ತೊಡೆದು ಹಾಕುತ್ತದೆನಿರ್ಣಯ ರಚನೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಭೂತ ಹಕ್ಕನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ಎಲ್ಲಾ ವರ್ಗಗಳ ಸ್ಥಳೀಯ ಸಮುದಾಯಗಳು ಹೆಚ್ಚು ಭಾಗಿಯಾಗಬೇಕು ಮತ್ತು ಪಾಲ್ಗೊಳ್ಳಬೇಕು

ಸಮೀಕರಣ

ನವೆಂಬರ್ 2008

******************************

**End Notes:**

[1]ಭಾರತದ ರಾಜ್ಯವಾಗಿರುವ ಕರ್ನಾಟಕ ದೇಶದ ದಕ್ಷಿಣ ಭಾಗವಾಗಿದೆ. ಇದು ಪ್ರದೇಶದಲ್ಲಿ ದೇಶದ ಎಂಟನೇ ಅತಿ ದೊಡ್ಡ ಮತ್ತು ಜನಸಂಖ್ಯೆಯಲ್ಲಿ ಒಂಬತ್ತನೇ ಅತಿ ದೊಡ್ಡ ರಾಜ್ಯವಾಗಿದ್ದು, 29 ಜಿಲ್ಲೆಗಳನ್ನು ಒಳಗೊಂಡಿದೆ. ತನ್ನ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮಗಳಿಂದಾಗಿ ಕಳೆದ ದಶಕಗಳಿಂದ ಇದು ಜಾಗತಿಕ ನಕ್ಷೆಯಲ್ಲಿ ಕಾಣಿಸಿಕೊಳ್ಳುತ್ತಿದೆ.

[1] ಕರ್ನಾಟಕ(ಭಾರತದಲ್ಲಿದೆ) ರಾಜ್ಯದ ರಾಜಧಾನಿಯು ಪೂರ್ವದ ಸಿಲಿಕಾನ್ ವ್ಯಾಲಿ ಎಂಬ ಗರಿಮೆಯನ್ನು ಪಡೆದುಕೊಂಡಿದೆ.

[1] ಟ್ಯಾಂಕ್ ಎಂಬುದರ ಸ್ಥಳೀಯ ಭಾಷೆಯ ಪದ.

[1] ಉಲ್ಲೇಖ

http://indiatoday.digitaltoday.in/index.php?issueid=11169&id=19470&option=com_content&task=view&sectionid=22

[1] *ಗುಜರಾತ್ ಭಾರತದ ಪಶ್ಚಿಮ ದಿಕ್ಕಿನ ತುತ್ತತುದಿಯ ರಾಷ್ಟ್ರವಾಗಿದೆ. ಈಗಿನ ರಾಜ್ಯ ಸರಕಾರವು ಪ್ರಬಲವಾದ ಆರ್ಥಿಕ ನೀತಿಯನ್ನು ಅನುಸರಿಸುತ್ತಿದೆ.*

[1] ಭೂ ಸ್ವಾಧೀನ ಕಾಯಿದೆ,1894ರ ಅನುಸಾರ

[1] ಸಾಮಾನ್ಯವಾಗಿ ನರ್ಮದಾ ಅಣೆಕಟ್ಟು ಎಂದು ಉಲ್ಲೇಖಿಸಲಾಗುತ್ತದೆ

[1] ಸ್ಥಳೀಯ ಜನತೆ

[1]ವಾಸ್ತವದಲ್ಲಿ, ಪ್ರವಾಸೋದ್ಯಮ ಬೆಳವಣಿಗೆಗಾಗಿರುವ ಯೋಜನೆಗಳು ಬಹಳ ಹಿಂದೆಯೇ ಅಂದರೆ 90ರ ದಶಕದ ಮಧ್ಯಭಾಗದಲ್ಲಿ ಆಗ ನಿಯುಕ್ತಿಯಾಗಿದ್ದ ಸಲಹೆಗಾರರ ಯೋಜನೆಯ ಶಿಫಾರಸ್ಸಿನ ಆಧಾರದಲ್ಲಿ ಪ್ರರಾರಂಭಿಸಲಾಯಿತು ಎನ್ನಲಾಗಿದೆ. ಆ ಹೊತ್ತಿನಲ್ಲಿ ಕೇವಾಡಿಯಾ ಕಾಲನಿಯಲ್ಲಿ ಅಲ್ಲದೆ, ಕಾಲುವೆಯುದ್ದಕ್ಕ ಇನ್ನು 4 ಕೇಂದ್ರಗಳಲ್ಲಿ ಪ್ರವಾಸೋದ್ಯಮವನ್ನು ಬೆಳೆಸಲು ಯೋಜನೆಯನ್ನು ಹಾಕಲಾಗಿತ್ತು. ಇದು ಈ ಯೋಜನೆಗಾಗಿ ಹಣ ಸಂಗ್ರಹಿಸಲು ಮಾಡಿದ ಪ್ರಯತ್ನಗಳಲ್ಲೊಂದಾಗಿತ್ತು ಎನ್ನಲಾಗಿದೆ. ನರ್ಮದಾ ಬಚಾವೋ ಆಂದೋಲನವು ವಿಷಯೋಚಿತವಾದ ಕಡತಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದೆ ಮತ್ತು ಗುಜರಾತ್ ಸರಕಾರವು ನ್ಯಾಯಾಲಯದಲ್ಲಿ ಇದನ್ನು ಅಲ್ಲಗಳೆದಿದೆ.ನೋಡಿ:"ಸಾರ್ವಜನಿಕ

ಉದ್ದೇಶಕ್ಕೆ?ಭವಿಷ್ಯದ ಪ್ರವಾಸಿ ತಾಣ/ಕೇಂದ್ರವು ಇಂದಿನ ನರ್ಮದ ನದಿ ಪಾತ್ರದ ಆದಿವಾಸಿಗಳನ್ನು ಮುಗಿಸಿಹಾಕುವುದು ಹೇಗೆ ಸಾಧ್ಯ?"ಕೇವಾಡಿಯ, ನರ್ಮದ ಜಿಲ್ಲೆ, ಗುಜರಾತ್ ಇಲ್ಲಿನ ಪ್ರವಾಸೋದ್ಯಮ ಯೋಜನೆಗಳು -ಸಮೀಕರಣ

[1] ಇದು ಬಾರತದ ದೇಶದ ಉತ್ತರ ರಾಜ್ಯಗಳಲ್ಲೊಂದು, ಹಿಮಾಲಯದ ಉನ್ನತ್ಯದಲ್ಲಿದೆ.

ಭಾರತದ ಯೋಜನಾ ಆಯೋಗವು 2005ರಲ್ಲಿ ಹೊರತಂದ ಹಿಮಾಚಲ ಪ್ರದೇಶ ಅಭಿವೃದ್ಧಿ ವರದಿಯು , ಆ ರಾಜ್ಯದಲ್ಲಿ ಪ್ರವಾಸೋದ್ಯಮ ಅತಿ ಮುಖ್ಯವಾದ ವಿಶ್ಲೇಷಣೆಗಳನ್ನು ಹೊಂದಿದೆ. ಈ ವರದಿಯು ಹೇಳುವಂತೆ, ಹಿಮಾಚಲ ಪ್ರವಾಸೋದ್ಯಮ ಇಲಾಖೆಯು ಇನ್ನು ಈಗಾಗಲೇ ಪರ್ಯಾಪ್ತವಾಗಿರು ಶಿಮ್ಲಾ-ಕುಲ್ಲು-ಮನಾಲಿ ವೃತ್ತವನ್ನು ಆಧರಿಸಿದ ಪ್ರವಾಸೋದ್ಯಮ ಧೋರಣೆಯನ್ನು ಕಾರ್ಯಗತಗೊಳಿಸುತ್ತಿದೆ ಮತ್ತು ಪ್ರಚಾರ ಮಾಡುತ್ತಿದೆ. ಆದರೂ, ಮೂಲಭೂತ ವ್ಯವಸ್ಥೆಯ ಅಗತ್ಯದ ಮೇಲಿನ ಒತ್ತಡದ ಬಗ್ಗೆ ಕಾಳಜಿಯು ಸ್ಥಳೀಯ ಸಂಪನ್ಮೂಲದ ಮೇಲಿನ ಪ್ರಾಧಾನ್ಯದಷ್ಟು ಇಲ್ಲ. ಆದರೆ, ವಾಸ್ತವವನ್ನು ಹೊರತೆಗೆದಾಗ ಕಾಣುವುದೇನೆಂದರೆ, ರಾಜ್ಯ ಸರಕಾರವು ಹೊಸ/ಇತರ ಸಂಭಾವ್ಯ ಪ್ರವಾಸಿ ತಾಣಗಳನ್ನು ಲಾಭದಾಯಕವಾಗಿ ಬಳಸದೆ ರಾಜ್ಯದ ಆದಾಯಕ್ಕೆ ಆ ಕ್ಷೇತ್ರದ ಕೊಡುಗೆಯನ್ನು ಹೆಚ್ಚಿಸುತ್ತಿಲ್ಲ. ಈ ಉದ್ದೇಶದ ಈಡೇರಿಕೆಗಾಗಿ ಪ್ರಸಕ್ತ ವರದಿಯು ಪ್ರವಾಸೋದ್ಯಮದ ಪುನಶ್ಚೇತನಕ್ಕಾಗಿ ಒಂದಿಷ್ಟು ಶಿಫಾರಸ್ಸುಗಳನ್ನು ಮುಂದುವರಿಸಿದೆ.ಇದರಲ್ಲಿ ಪ್ರಮುಖವಾದದ್ದು ಖಾಸಗಿ ಹೂಡಿಕೆದಾರರನ್ನು ಪ್ರವಾಸೋದ್ಯಮಕ್ಕೆ ಆಕರ್ಷಿಸುವ ಉದ್ದೇಶ ಹೊಂದಿರುವ ರಾಜ್ಯದ ಭೂ ಧೋರಣೆಯ ಬದಲಾವಣೆ. ಇದು ಮುಖ್ಯವಾಗಿ ಹಿಮಾಚಲ ಪ್ರದೇಶ ಭೂ ಸುಧಾರಣೆ ಕಾಯಿದೆಯ ಪರಿಚ್ಛೇದ 118, ಇದು ಆಸ್ತಿಯ ಖರೀದಿ ಮತ್ತು ಮಾರಾಟವನ್ನು ಹೊರ ರಾಜ್ಯದವರಿಗೆ ನಿಷೇಧಿಸುತ್ತದೆ. ಉಲ್ಲೇಖ:"ಪ್ರಸ್ತಾಪಿತ ಕುಲ್ಲುವಿನಲ್ಲಿನ ಹಿಮಾಲಯದ ಸ್ಕೈ-ಬೆಟ್ಟದಲ್ಲಿ ಯೋಜನೆಯ ಪರಿಣಾಮಗಳು, ಹಿಮಾಚಲ ಪ್ರದೇಶ-ಪ್ರಾಥಮಿತ ಸತ್ಯ ಶೋಧನಾ ವರದಿ".ಸಂಶೋಧನೆ, ಸಂಗ್ರಹ ಮತ್ತು ಲೇಖನ:ಮಾಂಶಿ ಆಶರ್, ಸ್ವಾತಂತ್ರ ಸಂಶೋಧಕ, ಹಿಮ ನೀತಿ ಚಳುವಳಿ, ಹಿಮಾಚಲ ಪ್ರದೇಶ, ಜನ ಜಾಗರಣೆ ಮತ್ತು ವಿಕಾಸ ಸಮಿತಿ(ಜೆಜೆವಿಎಸ್) ಕುಲ್ಲು ಜಿಲ್ಲೆ, ಎಚ್‌ಪಿ ಮತ್ತು ಸಮೀಕರಣ, ಬೆಂಗಳೂರು

[1] **ಮಹಾರಾಷ್ಟ್ರವು** ಭಾರತದ ಪಶ್ಚಿಮ ಕರಾವಳಿಯಲ್ಲಿ ನೆಲೆ ನಿಂತಿರುವ ರಾಜ್ಯ. ಇದು ಭಾರತದ ವಿಸ್ತೀರ್ಣದಲ್ಲಿ 3ನೇ ಹಾಗೂ ಜನಸಂಖ್ಯೆಯಲ್ಲಿ 2ನೇ ದೊಡ್ಡ ರಾಜ್ಯವಾಗಿದೆ. ವಾಣಿಜ್ಯ ಅಂಕಿಸಂಖ್ಯೆಗಳ ಪ್ರಕಾರ ಮಹಾರಾಷ್ಟ್ರವು ಭಾರತದ ಮುಂಚೂಣಿಯ ಕೈಗಾರಿಕ ರಾಜ್ಯವಾಗಿದ್ದು, ದೇಶದ ಕೈಗಾರಿಕ ಉತ್ಪನ್ನಕ್ಕೆ 15 ಶೇಕಡ ಮತ್ತು ನಿವ್ವಳ ದೇಶೀಯ ಉತ್ಪನ್ನದ 13.2 ಶೇಕಡ ಕೊಡುಗೆಯನ್ನು ಕೊಡುತ್ತಿದೆ. ಉಲ್ಲೇಖ:"ಮಹಾರಾಷ್ಟ್ರ", ಭಾರತ ಸರಕಾರ, ಗೃಹ ಸಚಿವಾಲಯ, ರಾಷ್ಟ್ರೀಯ ಮಾಹಿತಿ ಕೇಂದ್ರ " (PDF).

[13] "ಲಾವಸ ದ ಲೇಕ್ ಸಿಟಿ ನಿಯರ್ ಕಂಪ್ಲೀಶನ್"ಜನವರಿ 13
2007http://www.rediff.com/money/2007/jan/13spec.htm **& "ಹಾಲ್ ಆಫ್ ದ ಹಿಲ್ಸ್"** ನಿಧಿ ಜ್ಯಾಮ್‌ವಾಲ್
<http://www.downtoearth.org.in/full6.asp?foldername=20080915&filename=news&s id=2&page=1&sec_id=4>

[1] "ದ ಫೈನಲ್ ಕಾಲ್-ಇನ್ ಸರ್ಚ್ ಆಫ್ ಟ್ರೂ ಕಾಸ್ಟ್ ಆಫ್ ಅವರ್ ಹಾಲಿಡೇ" ಲಿಯೋ ಹಿಕ್‌ಮನ್, ಟ್ರಾನ್ಸ್‌ವರ್ಲ್ಡ್ ಪಬ್ಲಿಶರ್ಸ್, ***2007***, ಪರಿಚಯ

[1] ಉಲ್ಲೇಖ "ವುಮನ್ ಇನ್ ಟೂರಿಸಂ:ರಿಯಾಲಿಟೀಸ್, ಡಿಲಿಮಾಸ್ ಆಂಡ್ ಆಪರ್ಚುನಿಟೀಸ್", ಸಮೀಕರಣ ಸಂಶೋಧನ ಪತ್ರ, ಸೆಪ್ಟೆಂಬರ್ 2007

[1] **ಕೇರಳವು** ಭಾರತದ ನೈಋತ್ಯ ಭಾಗದಲ್ಲಿ ಇರುವ ರಾಜ್ಯವಾಗಿದ್ದು,"ದೇವರ ಸ್ವಂತ ನಾಡು" ಎಂದು ಕೇರಳ ಪ್ರವಾಸೋದ್ಯಮ ಇಲಾಖೆಯಿಂದ ಉಲ್ಲೇಖಿಸಲ್ಪಡುತ್ತದೆ. ಇದು ಭಾರತದ ಪ್ರಮುಖ ಪ್ರವಾಸಿ ಆಕರ್ಷಣೆಯಾಗಿದೆ..

[1] ಐಡಿ

[1] ವಿಶ್ವ ಬ್ಯಾಂಕ್‌ನ ಒಂದು ವರದಿಯು ಪ್ರವಾಸೋದ್ಯಮದಿಂದಾಗಿ ಗೋವಾದಲ್ಲಿ ಉಂಟಾದ ಪ್ರಾದೇಶಿಕ ಅಸಮತೋಲನ, ಪರಂಪರೆಯ ಚಟುವಟಿಕೆಗಳು, ಆದಾಯದ ಕಾಲಾವಲಂಬನೆ, ಸಮುದಾಯದ ಮೇಲಿನ ಪರಿಣಾಮ ಮತ್ತು ಇತರ ಅಧಪತನಗಳನ್ನು ತೋರಿಸುತ್ತದೆ. ಉಲ್ಲೇಖಗಳು ಸಾವ್ಕಾರ್ ಮತ್ತಿತರರಿಂದ ಪ್ರಕಟಿತವಾದ ಈ ವರದಿಯಲ್ಲಿ ಕಾಣಬಹುದು. 'ಟೂರಿಸಂ ಆಂಡ್ ದ ಎನ್ವಿರಾನ್‌ಮೆಂಟ್:ಕೇಸ್ ಸ್ಟಡಿ ಇನ್ ಗೋವಾ, ಇಂಡಿಯಾ ಆಂಡ್ ಮಾಲ್ಡೀವ್ಸ್', ವಿಶ್ವ ಬ್ಯಾಂಕ್, **1998**, ವರದಿ ಸಂಖ್ಯೆ**19681**, http://www-wds.worldbank.org/external/default/WDSContentServer/WDSP/IB/1999/10/19/000094946_99100712293543/Rendered/INDEX/multi_page.txt

[1] ಇದು ಮೊಟ್ಟಮೊದಲ ಸೋವಿಯತ್ ಒಕ್ಕೂಟದಲ್ಲಿ 1928ರಲ್ಲಿ ನಿಯಂತ್ರಿತ ಮತ್ತು ತ್ವರಿತ ವಾಣಿಜ್ಯ ಅಭಿವೃದ್ಧಿಗಾಗಿ ಪರಿಚಯಿಸಲ್ಪಟ್ಟಿತು. ಆ ಕಾಲದ ಸೋವಿಯತ್‌ನ ಔದ್ಯಮಿತ ಯಶಸ್ಸಿನ ಬಹುಭಾಗವು ಅಲ್ಲಿನ ಪಂಚವಾರ್ಷಿಕ ಯೋಡನೆಗಳ ಅನುಷ್ಠಾನದ ಪ್ರತಿಫಲ ಎನ್ನಲಾಗಿದೆ..

[1] ಕರಡು ಪ್ರತಿಯು ಯೋಜನಾ ಆಯೋಗ ಮತ್ತು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನೊಳಗೊಂಡ(ಭಾರತವು ಫೆಡರಲ್ ಪದ್ಧತಿಯನ್ನು ಹೊಂದಿದೆ). ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಯನ್ನು ಹೊಂದುವುದು ಅಗತ್ಯವಾಗಿದೆ. ಒಪ್ಪಿಗೆ ಪಡೆದ ಯೋಜನೆಯು ಮುಂದೆ ಮಂತ್ರಿ ಮಂಡಲ ಮತ್ತು ಸಂಸತ್ತಿನಲ್ಲಿ ಅಂಗೀಕರಿಸಲ್ಪಡಬೇಕು. ಈ ಯೋಜನೆಗಳ ಮುಖ್ಯ ಉದ್ದೇಶಗಳು ಈ ಕೆಳಗಿನವುಗಳನ್ನು ಸಾಧಿಸಲು ಮುಂದಿನ 5 ವರ್ಷಗಳ ಯೋಜನೆಯ ರೂಪುರೇಷೆಯನ್ನು ಹಾಕಿಕೊಡುವುದು. ಎಲ್ಲಾ ಸಮುದಾಯಗಳಿಗೆ ಸೇರಿದ ಜನರ ಅಭಿವೃದ್ಧಿಗಾಗಿ ಈ ದೇಶದ ಜನರ ಜೀವನ ಮಟ್ಟವನ್ನು ಮೇಲೆತ್ತುವುದು, ಜೀವನ ಗುಣಮಟ್ಟ ಸುಧಾರಣೆ, ದೇಶದ ಸಂಪನ್ಮೂಲಗಳ ಸರಿಯಾ/ದಕ್ಷ ಉಪಯೋಗ ಇತ್ಯಾದಿ.

[1] ಜಿಲ್ಲೆಯೆಂದರೆ ರಾಜ್ಯದೊಳಗಿನ ಪ್ರಧಾನ ಉಪ ವಿಭಾಗ(ಕೇಂದ್ರಾಡಳಿತ ಪ್ರದೇಶಗಳು ವಿಭಜಿಸಲ್ಪಟ್ಟಿಲ್ಲ). ವಸಾಹತು ಆಡಳಿತದ ಕಾಲದಲ್ಲಿ, ಕಲೆಕ್ಟರನು ತೆರಿಗೆ ಸಂಗ್ರಹಣೆ ಮತ್ತು ಕಾನೂನು ಸುವ್ಯವಸ್ಥೆಯ ಪಾಲನೆಗೆ ಜವಾಬ್ದಾರನಾಗಿರುತ್ತಾನೆ. 1992ರಿಂದ ಬಹಳಷ್ಟು ರಾಜ್ಯಗಳಲ್ಲಿ ಕಲೆಕ್ಟರನ ಪಾತ್ರವು ಜಿಲ್ಲೆಯ ಕಂದಾಯ ಇಲಾಖೆಯ ಉಸ್ತುವಾರಿ ಮತ್ತು ಕೃಷಿ, ನೀರಾವರಿ, ಲೋಕಾಯುಕ್ತ, ಅರಣ್ಯ ಮತ್ತು ಸಮಾಜಿಕ ಆರೋಗ್ಯ ಇಲಾಖೆ ಮುಂತಾದ ಸಾಮಾಜಿಕ ಕಳಕಳಿಯ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಬೆಂಬಲಿಸುವ ಇಲಾಖೆಗಳ ಕೆಲಸಗಳಿಗೆ ಸಹಕರಿಸುವುದು..

[1] ಉಲ್ಲೇಖ:ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು ಆವೃತ್ತಿ, **ಭಾರತ ರತ್ನ ಶ್ರೀ ನೆಹರು ಅವರಿಗೆ** ಅವರ **119ನೇ ಜಯಂತಿಯ ದಿನ** ಪಂಚಾಯತ್ ರಾಜ್ ಇಲಾಖೆಯ ಗೌರವ.

[1] ಇದು ಒಂದು ಬಾರತದ ಆಗ್ನೇಯ ಕರಾವಳಿಯ ರಾಜ್ಯವಾಗಿದ್ದು, ಇಲ್ಲಿನ ರಾಜ್ಯ ಸರಕಾರವು ಸಕ್ರಿಯ ಕೈಗಾರಿಕೀಕರಣದ ಧೋರಣೆಯನ್ನು ಅನುಸರಿಸುತ್ತಿದೆ..

[1] ಭಾರತದ ಪೂರ್ವ ಕರಾವಳಿ ರಾಜ್ಯಗಳು ಆಲೀವ್ ರಿಡಲ್ ಹೊಂದಿರುವುದಕ್ಕೆ ಹೆಸರುವಾಸಿಯಾಗಿದೆ. ಪ್ರಸಕ್ತ, ಅರಣ್ಯ ಪ್ರದೇಶಗಳಲ್ಲಿ ಬೃಹತ್ ಗಣಿ ಆಧಾರಿತ ಉದ್ಯಮಗಳನ್ನು ವೃದ್ಧಿಗೊಳಿಸಲಾಗುತ್ತಿದೆ..

[1] ಇದು ಭಾರತದ ಪಶ್ಚಿಮ ಮರಳುಗಾಡು ರಾಜ್ಯವಾಗಿದ್ದು, ವಾಸ್ತುಶಿಲ್ಪ ವೈಭವಕ್ಕೆ ಮತ್ತು ಪ್ರವಾಸಿ ವೃದ್ಧಿಗೆ ಹೆಸರುವಾಸಿಯಾಗಿದೆ..

[1] ಭಾರತೀಯ ಆಡಳಿತ ಸೇವೆ(ಐಎಎಸ್) ಭಾರತ ಸರಕಾರದ ಆಡಳಿತ ಸಿವಿಲ್ ಸೇವೆಯಾಗಿದೆ. ದೇಶದಾದ್ಯಂತ ಐಎಎಸ್ ಅಧಿಕಾರಿಗಳು ವಿವಿಧ ಸರಕಾರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರೊಂದಿಗೆ, ಯೂನಿಯನ್ ಸರಕಾರ(ಕೇಂದ್ರ ಸರಕಾರ) ಮತ್ತು ರಾಜ್ಯ ಸರಕಾರದ ಅಧಿಕಾರಶಾಹಿಯನ್ನು ನಿರ್ವಹಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ..

[1] ಉಲ್ಲೇಖ"**ನಾಟ್ ಇನ್ ಮೈ ಬ್ಯಾಕ್‌ಯಾರ್ಡ್!ಹೌ ಗವರ್ನ್‌ಮೆಂಟ್ ಆಂಡ್ ಇಂಡಸ್ಟ್ರಿ ಹ್ಯಾವ್ ವಾಶ್ಡ್ ದೆಯರ್ ಹ್ಯಾಂಡ್ಸ್" ಆಫ್ ರೆಸ್ಪಾನ್ಸಿಬಿಲಿಟಿ ಆಫ್ ಟೂರಿಸಂ:ಎಕ್ಸ್‌ಪ್ಲೋರಿಂಗ್ ಇಂಡಿಯನ್ ರಿಯಾಲಿಟಿಸ್**, ಸಮೀಕರಣ ಮಾರ್ಚ್ 2008 & **ಕಮೆಂಟ್ಸ್ ಆನ್ ದ ಪ್ಲಾನಿಂದ್ ಕಮಿಶನ್ ಕಾನ್ಸ್ಟಿಟ್ಯೂಟೆಡ್ ವರ್ಕಿಂಗ್ ಗ್ರೂಪ್ ರಿಪೋರ್ಟ್ ಆನ್ ಟೂರಿಸಂ ಫಾರ್ ಇಲೆವಂತ್ ಫೈವ್ ಇಯರ್ ಪ್ಲಾನ್, **ಸಮೀಕರಣ**, **ಜುಲೈ **2007**

[1] ಅಣೆಕಟ್ಟು, ಗಣಿಗಾರಿಕೆ, ಅರಣ್ಯ ನಾಶ ಮತ್ತು ಇತರ ಅಭಿವೃದ್ಧಿ ಯೋಜನೆಗಳಿಂದಾಗಿ ಸ್ಥಳಾಂತರಗೊಂಡ ಸುಮಾರು 10 ಮಿಲಿಯನ್ ಮಂದಿ ಇನ್ನೂ "ಪುನರ್ವಸತಿಗಾಗಿ" ಕಾಯುತ್ತಿದ್ದಾರೆ ಎಂಬುದಾಗಿ 1994ರಲ್ಲಿ ಭಾರತೀಯ ಸರಕಾರವು ಸೂಚಿಸಿತ್ತು. ಹೆಚ್ಚಿನ ಸ್ವತಂತ್ರ ಸಂಶೋಧಕರು ಈ ಅಂಕಿಅಂಶವನ್ನು ಮಿತವಾದದ್ದು ಎಂಬುದಾಗಿ ಪರಿಗಣಿಸಿದ್ದರು. ಸುಮಾರು 21.3 ಮಿಲಿಯನ್ ಅಭಿವೃದ್ಧಿಯು ಅಣೆಕಟ್ಟೆನಿಂದ(16.4 ಮಿಲಿಯನ್), ಗಣಿಗಾರಿಕೆಯಿಂದ(2.55 ಮಿಲಿಯನ್), ಕೈಗಾರಿಕಾ ಅಭಿವೃದ್ಧಿಯಿಂದ(1.25 ಮಿಲಿಯನ್) ಮತ್ತು ವನ್ಯ ಜೀವಿ ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವನಗಳು(0.6 ಮಿಲಿಯನ್) ನಿರಾಶ್ರಿತರು ಸೇರಿದಂತೆ ಭಾರತದ ನಿರಾಶ್ರಿತರ ಮನವೊಲಿಸಿದೆ. 56 ಮಿಲಿಯನ್ ಮಂದಿಯಲ್ಲಿ, ಶೇ.62 ಎಸ್‌ಸಿ ಮತ್ತು ಎಸ್‌ಟಿಗಳು ಅಣೆಗಟ್ಟು ನಿರ್ಮಾಣದಿಂದಾಗಿ ಸ್ಥಳಾಂತರಗೊಂಡಿದ್ದಾರೆ ಮತ್ತು ಸುಮಾರು 5 ಮಿಲಿಯನ್ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗಿದೆ ಎಂಬುದಾಗಿ ಭಾರತೀಯ ಅಣೆಕಟ್ಟುಗಳ ಮೇಲಿನ ವಿಶ್ವ ಆಯೋಗ ಅಧ್ಯಯನದ ವರದಿಗಳು ತಿಳಿಸಿವೆ. ಉಲ್ಲೇಖ"ಡ್ಯಾಮ್ಡ್ ಡಿಸ್ಪೋಸ್ಡ್ ಡಿಸ್ಪ್ಲೇಸ್ಡ್" ,ಸುನಿಲ್ ಕುಕ್ಸಲ್, ಕಾಂಬಾಟ್ ಲಾ, ಆವೃತ್ತಿ 7, ಪ್ರಕಟಣೆ 1 ಫೆಬ್ರವರಿ-ಮಾರ್ಚ್ 2006http://www.combatlaw.org/information.php?issue_id=27&article_id=692

[1] ಉಲ್ಲೇಖ "ಪಬ್ಲಿಕ್ ಪರ್ಪಸ್?ಹೌ ದ ಟೂರಿಸ್ಟ್ ಡೆಸ್ಟಿನೇಶನ್ ಆಫ್ ಟುಮಾರೋ ಕಮ್ಸ್ ಟು ಡಿಸ್ಪೋಸಸ್ ದ ಆದಿವಾಸಿಸ್ ಆಫ್ ನರ್ಮದಾ ಟುಡೆ" ಗುಜರಾತಿನ ನರ್ಮದಾ ಜಿಲ್ಲೆಯ ಕೇವಾಡಿಯಾದ ಪ್ರವಾಸೋದ್ಯಮ ಯೋಜನೆಯ ಮೇಲಿನ ತನಿಖಾ ವರದಿ-ಮಾರ್ಚ್ 2008

30 ಉಲ್ಲೇಖ "ಡ್ರೀಮ್ ಡೆಸ್ಟಿನೇಶನ್ ಫಾರ್ ವರ್ಲ್ಡ್ ಕ್ಲಾಸ್ ಟೂರಿಸ್ಟ್ಸ್....ನೈಟ್‌ಮೇರ್ ಫಾರ್ ದ ಹಿಮಾಲಯಾಸ್"ಹಿಮಾಚಲ ಪ್ರದೇಶದ ಕುಲ್ಲುವಿನಲ್ಲಿನ ಪ್ರಸ್ತಾಪಿತ ಹಿಮಾಲಯನ್ ಸ್ಕೈ ಗ್ರಾಮ ಯೋಜನೆಯ ಪರಿಣಾಮ.ಹಿಮಾಚಲ ಪ್ರದೇಶ ಹಿಂ ನೀತಿಗಾಗಿ ಮಾಂಶಿ ಆಶರ್ ಅವರು ಬರೆದಿರುವ ಮತ್ತು ಸಂಗ್ರಹಿಸಿರುವ ಪೂರ್ವಭಾವಿ ವಾಸ್ತವ ಶೋಧ ವರದಿ ಸಂಶೋಧನೆ, ಜನ ಜಾಗರಣ್ ಈವಂ ವಿಕಾಸ್ ಸಮಿತಿ(ಜೆಜೆವಿಎಸ್), ಕುಲ್ಲು ಜಿಲ್ಲೆ, ಹಿಮಾಚಲ ಪ್ರದೇಶ & ಸಮೀಕರಣ, ಬೆಂಗಳೂರು, ಕರ್ನಾಟಕ, ಮಾರ್ಚ್2008

[1] 1 ಎಕರೆ=43,560 ಚದರ ಅಡಿ

[1] *ಒಂದು ಹೆಕ್ಟೇರ್ ಎಂದರೆ ಸುಮಾರು 2.5 ಎಕರೆ*

[1] ಕೆಲವು ಪ್ರವಾಸೋದ್ಯಮ ಯೋಜನೆಗಳಿದೆ ಆದ್ದರಿಂದ ಅವರಿಗೆ ಇಐಎಯ ಅಗತ್ಯವಿರುವುದಿಲ್ಲ ಎಂದು ಹೇಳುವ ಮೂಲಕ ವಕ್ತಾರರು ಯೋಜನೆಯ ಬಗ್ಗೆ ಪ್ರತಿಪಾದಿಸುತ್ತಾರೆ. ಜೊತೆಗೆ, ಮಹಾರಾಷ್ಟ್ರ ಸರಕಾರದ ಗಿರಿಧಾಮ ಶಾಸನ,1996ರ ಆದೇಶದ ಆಧಾರದಲ್ಲಿ , ಲಾವಸವು ಮಹಾರಾಷ್ಟ್ರ ಪರಿಸರ ಇಲಾಖೆಯಿಂದ ಪರಿಸರ ಸ್ಪಷ್ಟೀಕರಣವನ್ನು ಪಡೆದುಕೊಂಡಿದೆ.ಪ್ರವಾಸೋದ್ಯಮ ಯೋಜನೆಗಳಿಂದಾಗಿ ಅಂತಹ ಬ್ರಹತ್ ಯೋಜನೆಗೆ ಹೇಗೆ ವಿನಾಯತಿ ನೀಡಲಾಯಿತು? ಇದು ಖಂಡಿತವಾಗಿಯೂ ಸ್ಥಳೀಯ ವಾತಾವರಣ ವ್ಯವಸ್ಥೆಯ ಮೇಲೆ ಪರಿಸರ ಪ್ರಭಾವವನ್ನು ಬೀರುತ್ತದೆ ಹಾಗೂ ಸ್ಥಳೀಯ ಪಂಗಡಗಳ ಜೀವ ಮತ್ತು ಜೀವನಾಧಾರ ಮೇಲೆ ತೊಡಕನ್ನು ಉಂಟುಮಾಡುತ್ತದೆ ಎಂಬುದಾಗಿ ಆಂದೋಲನಕಾರರು ಪ್ರಶ್ನಿಸಿದ್ದರು.

[1] ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಏಶಿಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಭಾರತೀಯ ಸರಕಾರದ ನಡುವಿನ ಪಾಲುದಾರಿಕೆಯು ಈವರೆಗೆ ದಕ್ಷಿಣ ಏಶಿಯಾ ಉಪ ಪ್ರಾದೇಶಿಕ ಆರ್ಥಿಕ ಸಹಕಾರ(ಎಸ್‌ಎಎಸ್‌ಇಸಿ) ಕಾರ್ಯಕ್ರಮಕ್ಕೆ ಮಾತ್ರ ಸೀಮಿತವಾಗಿದ್ದು, ಭೂತಾನ್, ನೇಪಾಳ, ಬಾಂಗ್ಲಾದೇಶದ ಹೊರತಾಗಿ ಭಾರತವು ಒಂದು ಗಮನಿಸಲ್ಪಡುತ್ತಿರುವ ದೇಶವಾಗಿದೆ.ಮೊಟ್ಟ ಮೊದಲ ಬಾರಿಗೆ ಪ್ರಸ್ತಾಪಿತ ಒಟ್ಟಾರೆ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿ ಯೋಜನೆ(ಐಟಿಐಡಿಪಿ)ಯ ಮೂಲಕ ಭಾರತದಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸಾಲ ನೀಡುವ ಬಗ್ಗೆ ಎಡಿಬಿಯು ಚಿಂತನೆ ನಡೆಸಿದೆ.  ಭಾರತೀಯ ಸರಕಾರದ ಮನವಿಯ ಮೇರೆಗೆ ಇದು ಪ್ರಕ್ರಿಯೆಯಲ್ಲಿದ್ದು, ಪ್ರಸಕ್ತ, ತಾಂತ್ರಿಕ ಸಹಕಾರ(ಟಿಎ) ವರದಿಗಳು ಸಿದ್ಧತಾ ಹಂತದಲ್ಲಿವೆ.

[1] ಉಲ್ಲೇಖ"ಬಾರೋವಿಂಗ್ ಎಸ್‌ಇಝೆಡ್ ಐಡಿಯಾ, ಸೆಂಟರ್ ಸ್ಟಾರ್ಟ್ಸ್ ವರ್ಕಿಂಗ್ ಆನ್ ಸ್ಪೆಶಲ್ ಟೂರಿಸಂ ಝೋನ್ಸ್", ನವೆಂಬರ್ 2, 2006, ಇಂಡಿಯನ್ ಎಕ್ಸ್‌ಪ್ರೆಸ್, ನವದೆಹಲಿ

[1] ಉಲ್ಲೇಖ"ಪ್ರಧಾನಮಂತ್ರಿಗಳಿಗೆ ಸಲ್ಲಿಸಲಾದ ಸಿಐಐ ವರದಿ:"ಇಂಡಿಯಾ ನೀಡ್ಸ್ ಭಾರತ್ ನಿರ್ಮಾಣ ಪ್ಲಸ್ ಫಾರ್ ಇಂಕ್ಲೂಸಿವ್ ಗ್ರೋತ್" ಜೂನ್ 01, 2007http://cii.in/full_story.php?menu_id=78&news_id=74

[1] ಎಪಿ ಸರಕಾರದ ಸರಕಾರ ಆದೇಶ ಸಂಖ್ಯೆ 34, ಫೆಬ್ರವರಿ 11,2008

[1] ಪ್ರಸ್ತಾಪಿತ ಯೋಜನೆಯ ವಿರುದ್ಧ ಆಗಸ್ಟ್ 2008ರಂದು ರಾಷ್ಟ್ರೀಯ ಜನಾಂದೋಲ ಒಕ್ಕೂಟದಿಂದ ಕರೆಯಲಾದ ಆಂದೋಲನ ಕರೆಯ ಪ್ರಕಾರ ಗಮನಕ್ಕೆ ತಂದ ಒಂದು ಪ್ರಮುಖ ಅಂಶವೆಂದರೆ-"ಮೀನುಗಾರರು, ಸಣ್ಣ ಮತ್ತು ಮಧ್ಯಮ ರೈತರು, ದಲಿತ ಕಾರ್ಮಿಕರು, ಆದಿವಾಸಿಗಳು ಸೇರಿದಂತೆ ಸುಮಾರು 2.5 ಕೋಟಿ ಜನರು ಸ್ಥಳಾಂತರಗೊಂಡಿದ್ದು, ಈ ಪ್ರಕ್ರಿಯೆಯಲ್ಲಿ ಅವರ ಜೀವನಾಧರವು ನಾಶವಾಗಿದೆ. ಇದು ಈಗಾಗಲೇ ಟಾಡಾ, ಕೃಷ್ಣ ಪಟ್ಟಣಂ ಮತ್ತು ಪರವಾದಗಳಲ್ಲಿ ಸಂಭವಿಸಿದೆ."

[1] ಉಲ್ಲೇಖ " **ಎ ಪ್ಲಾನ್ ಮೇಡ್ ಟು ಆರ್ಡರ್**" ನವೆಂಬರ್ 1997 ನಗರ ಅಭಿವೃದ್ಧಿ ಇಲಾಖೆಯ ಮೂಲಕ ಪೂನಾದ ಪ್ರಾದೇಶಿಕ ಯೋಜನೆಯನ್ನು ಸರಿಹೊಂದುವಂತೆ ತಿದ್ದುಪಡಿ ಮಾಡಲಾಗಿದೆ.

[1] ಇನ್ನೊಂದು ಬೃಹತ್ ಯೋಜನೆ, ಮಹಾರಾಷ್ಟ್ರ ಪಶ್ಚಿಮ ಘಟ್ಟದಲ್ಲಿನ ಪ್ರಮುಖ ಗಿರಿಧಾಮ ಸಮೀಪದ ಜೀವನಶೈಲಿಯ ಖಾಸಗಿ ಸ್ಥಿರಾಸ್ತಿ ಅಭಿವೃದ್ಧಿ. ಪರಿಸರವಾದಿಗಳಿಂದಾಗಿ ಕಾನೂನು ಸಂಕಷ್ಟವನ್ನು ಎದುರಿಸುತ್ತಿರುವ ಈ ಯೋಜನೆಯು ವಿವಾದಾತ್ಮಕವಾಗಿ ಉಳಿದುಕೊಂಡಿದೆ..

[1] ಐಎಎನ್‌ಎಸ್, ಮಾರ್ಚ್ 12,2007

[1] ಉಲ್ಲೇಖ"ದ ರೈಟ್ ಟು ಲಿವ್ ವಿತ್ ಡಿಗ್ನಿಟಿ", ಪ್ರಭು, ಪ್ರದೀಪ್, ಸೆಮಿನಾರ್(552) ಆಗಸ್ಟ್ 2005. ಲೇಖಕರು, ಬುಡಗಟ್ಟು ಜನಾಂಗ(ಅರಣ್ಯ ಹಕ್ಕುಗಳ ಗುರುತಿಸುವಿಕೆ)ಮಸೂದೆ 2005ರ ಕರಡು ಸಮಿತಿಯಲ್ಲಿ ಭಾಗಿಯಾಗಿದ್ದ ಗುಂಪಿನ ಸದಸ್ಯ